# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರುವರಿ 2012

II ಧಿಯೋ ಯೋನಃ ಪ್ರಚೋದಯಾತ್ II

ಬೆಲೆ ರೂ.2.50
WPP No. SK/MNG/WPP/69
D.O.P - 15th of every month from Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-12 ಸಂಚಿಕೆ-2 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.

ಮನೋಹರಪ್ರಸಾದ್ ಇವರಿಗೆ ಬನ್ನಂಜೆ ರಾಮಾಚಾರ್ಯ ಸಂಸ್ಮರಣಾ ಪುರಸ್ಕಾರ



ಪುಟ-3

ಕೆ. ಹರಿಶ್ಚಂದ್ರನ್ ಅವರಿಗೆ ಮೃದಂಗ ಚಕ್ರವರ್ತಿ ಪ್ರಶಸ್ತಿ ಪ್ರದಾನ
-ಸುಕುಮಾರ ಆಲಂಪಾಡಿ



ಪುಟ-5



ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



ಡಾ। ಎಚ್.ವಿ.ನರಸಿಂಹಮೂರ್ತಿ
ಪುಟ-6

'ನಮ್ಮ ಮನೆ'-ಒಂದು ಅವಲೋಕನ....







ಪುಟ-7 -ವೈ. ಮೋಹನರಾವ್

## ಉಡುಪಿಯ ಶ್ರೀಶಾರದಾ ಟ್ರೋಫಿಯು ಯುವಕರ ಸೌಹಾರ್ದ ಕ್ರೀಡಾ ಕೂಟವಾಗಿದೆ : ಬೊಕ್ಕಸ ಚಂದ್ರಶೇಖರ ರಾವ್



ನಮ್ಮ ಸಮಾಜದ ಯುವಕರು ದೂರದ ಊರುಗಳಿಂದ ಅಂದರೆ ಬೆಂಗಳೂರು, ಮೈಸೂರುಗಳಿಂದ ಆಗಮಿಸಿ, ಉಡುಪಿಯಲ್ಲಿ ಶಾರದಾ ಟ್ರೋಫಿಯಲ್ಲಿ ಭಾಗವಹಿಸಿ, ಸಮಾಜ ಬಾಂಧವರು ಒಗ್ಗೂಡುವಂತಾಗಿದೆ. ಇದಕ್ಕಾಗಿ ಸಂಘಟಕರಾದ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಇವರನ್ನು ಅಭಿನಂದಿಸುತ್ತೇನೆ ಎಂದು ಕರ್ನಾಟಕ ಬ್ಯಾಂಕಿನ ಡಿಜಿಎಮ್, ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಶ್ರೀಶಾರದಾ ಟ್ರೋಫಿಯ ಬಹುಮಾನ ವಿತರಣೆ ಸಂದರ್ಭದಲ್ಲಿ ತಿಳಿಸಿ ದರು. ಉಡುಪಿ ನಗರಸಭೆಯ ಮಣಿಪಾಲ ವಾರ್ಡಿನ ಸದಸ್ಯರಾದ ಶ್ರೀ ದೇವೇಂದ್ರ ಪ್ರಭು ಇನ್ನೋರ್ವ ಮುಖ್ಯ ಅತಿಥಿಗಳಾಗಿದ್ದರು.

ತಾ.5-2-2012 ಆದಿತ್ಯವಾರ ಬೆಳಿಗ್ಗೆಯಿಂದಲೇ ಮಣಿಪಾಲದ ಎಮ್‌ಜೆಸಿ ಹಾಗೂ ಮಣ್ಣಪಳ್ಳ ಗ್ರೌಂಡಿನಲ್ಲಿ ದೂರದ ಮೈಸೂರು, ಬೆಂಗಳೂರು, ಪುತ್ತೂರುಗಳಿಂದ 19 ತಂಡಗಳು ಭಾಗವಹಿಸಿ, ಶ್ರೀಶಾರದಾ ಟ್ರೋಫಿ ಪಂದ್ಯಾಟ ಆರಂಭಗೊಂಡಿತು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಡುಪಿ ಇದರ ಯುವವೇದಿಕೆ ಹಾಗೂ ಕ್ರೀಡಾ ವೇದಿಕೆಯ ವತಿಯಿಂದ ಕಳೆದ 21 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವನ್ನು ಈ ಬಾರಿಯೂ ಮಣಿಪಾಲದಲ್ಲಿ ನಡೆಸಲಾಯಿತು. ಇಡೀ ದಿನದ ಕಾರ್ಯಕ್ರಮದಲ್ಲಿ ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಊಟದ ವ್ಯವಸ್ಥೆಗಳನ್ನು ಉತ್ತಮವಾಗಿ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಯುವ ವೇದಿಕೆ ಸದಸ್ಯರು ಮತ್ತು ಕ್ರೀಡಾ ವೇದಿಕೆಯ ಸದಸ್ಯರು, ಸಂಘದ ಆಡಳಿತೆ ಮಂಡಳಿಯ ಸದಸ್ಯರು ನಡೆಸಿಕೊಟ್ಟರು.

ಶ್ರೀ ಶಾರದಾ ಟ್ರೋಫಿ-2012 ಸೆಮಿಫೈನಲ್‌ಗೆ ಕುಂದಾಪುರ-ಕೋಟೇಶ್ವರ ಮತ್ತು ಜೆಸಿಟಿ ರಾಯಲ್ಸ್ ಹಾಗೂ ಜೆಸಿಟಿ ಚಾಲೆಂಜರ್ಸ್ ಬೆಂಗಳೂರು ಮತ್ತು ಎಫ್‌ಡಬ್ಲ್ಯುಎಫ್ ಬೆಂಗಳೂರು ತಂಡಗಳು ಪ್ರವೇಶಿಸಿದವು. ಫೈನಲ್ ಪಂದ್ಯದಲ್ಲಿ ಜೆಸಿಟಿ ರಾಯಲ್ಸ್, ಬೆಂಗಳೂರು ಹಾಗೂ ಬೆಂಗಳೂರು ಎಫ್‌ಡಬ್ಲ್ಯುಎಫ್ ತಂಡಗಳು ಸೆಣಸಾಡಿ ಬೆಂಗಳೂರಿನ ಜೆಸಿಟಿ ರಾಯಲ್ಸ್ ತಂಡವು ಶ್ರೀಶಾರದಾ ಟ್ರೋಫಿ-2012ನ್ನು ಗೆದ್ದುಕೊಂಡಿತು. ರನ್ನರ್‌ಅಪ್‌ನಲ್ಲಿ ಬೆಂಗಳೂರು ಎಫ್‌ಡಬ್ಲ್ಯುಎಫ್ ತಂಡವು ತೃಪ್ತಿ ಪಡೆಯಿತು.

**ಶ್ರೀ ಶಾರದಾ ಟ್ರೋಫಿ-2012 :**

ವಿನ್ನರ್ಸ್ : ಬೆಂಗಳೂರು ಜೆಸಿಟಿ ರಾಯಲ್ಸ್, ರನ್ನರ್ಸ್ : ಬೆಂಗಳೂರು ಎಫ್‌ಡಬ್ಲ್ಯುಎಫ್, ಅತ್ಯುತ್ತಮ ಬ್ಯಾಟ್ಸ್‌ಮೆನ್ : ಕಿರಣ್ ಕುಮಾರ್ ಬೆಂಗಳೂರು ಜೆಸಿಟಿ ತಂಡ, ಅತ್ಯುತ್ತಮ ಬೌಲರ್ : ಸೂರಜ್‌ರಾವ್ ಪಡುಬೆಳ್ಳೆ ತಂಡ, ಆಲ್‌ರೌಂಡರ್ (ಸವ್ಯಸಾಚಿ):ಮನೋಜ್, ಜೆಸಿಟಿ ರಾಯಲ್ಸ್ ಬೆಂಗಳೂರು,

ಸೆಮಿಫೈನಲ್ ಸೋತವರು: 1.ಕುಂದಾಪುರ ತಂಡ 2. ಬೆಂಗಳೂರು ಚಾಲೆಂಜರ್ಸ್

**ಜ್ಯೂನಿಯರ್ ಕ್ರಿಕೆಟ್ :**

(3ನೇ ಪುಟಕ್ಕೆ...)

## ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳ ಭೇಟಿ

ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಹಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಶಂಕರ ಭಾರತೀ ಸ್ವಾಮಿಗಳು ತಾ.5-2-2012ರಂದು ಉಡುಪಿಗಾಗಮಿಸಿದರು. ಅವರನ್ನು ಜ್ಞಾನ ಭಾರತೀ, ಉಡುಪಿ ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಶ್ರೀ ಶ್ರೀ ಗಳು ತಾ.5-2-2012ರಿಂದ 7-2-2012ರ ವರೆಗೆ ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ವಾಸ್ತವ್ಯವಿದ್ದು ಶ್ರೀಕರಾರ್ಚಿತ ಚತುರ್ಭುಜ ಶ್ರೀರಾಮನ ಪೂಜೆ ಜರಗಿಸಿ ಶ್ರೀಶಾರದಾ ಮಂಟಪ ಮತ್ತು ಜ್ಞಾನಭಾರತೀ ಉಡುಪಿ ವತಿಯಿಂದ ಪಾದ ಪೂಜೆ ಮತ್ತು ಭಿಕ್ಷಾ ಸೇವೆ ಸ್ವೀಕರಿಸಿ ಮಂತ್ರಾಕ್ಷತೆ ಕರುಣಿಸಿದರು. ಶ್ರೀಶಾರದಾ ಮಂಟಪದ ವತಿ ಯಿಂದ ಶ್ರೀ ಎಸ್.ಎಮ್.ರಾವ್ ದಂಪತಿಗಳು ಮತ್ತು ಜ್ಞಾನಭಾರತೀ ವತಿಯಿಂದ ಡಾ। ಎಸ್. ಎಲ್. ಕರಣಿಕ ದಂಪತಿಗಳು ಪಾದ ಪೂಜೆ ನೆರವೇರಿಸಿದರು.

ತಾ.06-02-2012ರಂದು ಸಂಜೆ ಗಂಟೆ 4ಕ್ಕೆ ಸುಮಾರು 50ಮಂದಿ ಮಹಿಳೆಯರು ಉಡುಪಿ, ಬಾರ್ಕೂರು, ಶಂಕರನಾರಾಯಣ ಮತ್ತು ಕೊಲ್ಲೂರು ಕಡೆಗಳಿಂದಾಗಮಿಸಿ ಶ್ರೀಸೌಂದರ್ಯ ಲಹರೀ ಪಾರಾಯಣ ನಡೆಸಿಕೊಟ್ಟರು. ಕೊನೆಯಲ್ಲಿ ಶ್ರೀ ಶ್ರೀಗಳು ಸೌಂದರ್ಯ ಲಹರೀ ಸ್ತೋತ್ರಗಳ ಮಹತ್ವದ ಕುರಿತು ಪ್ರವಚನ ನೀಡಿ ಮಂತ್ರಾಕ್ಷತೆ ನೀಡಿ ಆಶೀರ್ವಚಿಸಿದರು. ಅಲ್ಲದೇ ಉಡುಪಿ ಮತ್ತು ದ.ಕ.ಜಿಲ್ಲೆಯ ಮಾತೆಯರೆಲ್ಲರೂ ಮನೆ ಮನೆಗಳಲ್ಲಿ ಶ್ರೀ ಶಾಂಕರ ಸ್ತೋತ್ರ ಪಾರಾಯಣ ನಡೆಸುವಂತೆ ಕರೆಕೊಟ್ಟರು.

ಜ್ಞಾನಭಾರತಿಯ ಕಾರ್ಯದರ್ಶಿ ಡಾ। ಎಸ್.ಎಲ್.ಕರಣಿಕ ಸ್ವಾಗತಿಸಿ ಡಾ। ಎಂ.ಆರ್. ಹೆಗ್ಡೆ ವಂದಿಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಬಿ.ಕೃಷ್ಣಮೂರ್ತಿ ರಾವ್, ಹವ್ಯಕ ಸಭಾದ ಅಧ್ಯಕ್ಷ ಡಾ। ಕೆ.ಜಿ.ಭಟ್ಟ, ಎನ್. ರಾಮ ಭಟ್ಟ, ಶ್ರೀ ಅಜಿತ್‌ಕುಮಾರ್ ಹಾಗೂ ಅಧಿಕ ಸಂಖ್ಯೆಯಲ್ಲಿ ಭಕ್ತಭಿಮಾನಿಗಳು ಉಪಸ್ಥಿತರಿದ್ದರು.

**-ಕಾರ್ಯದರ್ಶಿ, ಜ್ಞಾನಭಾರತಿ, ಉಡುಪಿ**

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

## ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ

ತಾ.20-02-2012, ಸೋಮವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಬೆಳಿಗ್ಗೆ 10ರಿಂದ 12ರ ತನಕ ಶ್ರೀ ಕೆ.ಜೆ.ಗಣೇಶ್ ಮತ್ತು ಬಳಗದವರು ನಾದಪ್ರಿಯ ಶಿವನಿಗೆ ಭಕ್ತಿ ಪೂರ್ವಕವಾಗಿ ಅವನನ್ನು ಸ್ತುತಿಸುವ ಯಕ್ಷಗಾನದ ವಿವಿಧ ಗೀತೆಗಳನ್ನು ಕಲಾತ್ಮಕವಾಗಿ ಸಂಕಲ್ಪಿಸಿ ''ಯಕ್ಷ ಸಂಗೀತದ'' ರೂಪದಲ್ಲಿ ಅರ್ಪಿಸಲಿದ್ದಾರೆ. ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಪ್ರಸಾದ ವಿತರಣೆಯೊಂದಿಗೆ ಕೊನೆಗೊಳ್ಳುವ ಈ ವಿನೂತನವಾದ ಕಾರ್ಯಕ್ರಮಕ್ಕೆ ಎಲ್ಲರಿಗೂ ಆದರದ ಸ್ವಾಗತ. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

II ಶಾರದಾ ಶಾರದಾಂಭೋಜ ವದನಾ ವದನಾಂಬುಜೇ ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ II



## ಕರೆಯೋಲೆ

ಪ್ರಿಯರೇ,

ಸ್ವಸ್ತಿ! ಶ್ರೀ ಖರ ನಾಮ ಸಂ।ರದ ಕುಂಭ ಮಾಸ ದಿನ .... ಸಲುವ
ಮೀನ ಸಂಕ್ರಮಣ ತಾ.14-03-2012ನೇ ಬುಧವಾರ

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವವು

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಬಿ. ಕೃಷ್ಣಮೂರ್ತಿ ರಾವ್**
ಕಾರ್ಯದರ್ಶಿ

**ಸಿ.ಎಸ್.ರಾವ್**
ಅಧ್ಯಕ್ಷರು

**ಕಾರ್ಯಕ್ರಮ :** ***ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ***

ಸಮಾಜಬಾಂಧವರು ಇದನ್ನೇ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಳ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

*ಗಜಾನನಂ ಭೂತಗಣಾದಿ ಸೇವಿತಂ ।*
*ಕಪಿತ್ಥ ಜಂಬೂಫಲಸಾರ ಭಕ್ಷಿತಂ ॥*
*ಉಮಾಸುತಂ ಶೋಕವಿನಾಶ ಕಾರಣಂ ।*
*ನಮಾಮಿ ವಿಘ್ನೇಶ್ವರ ಪಾದಪಂಕಜಂ ॥*

ಆನೆಯ ಮುಖವುಳ್ಳವನಾಗಿ, ಭೂತಗಣಾದಿಗಳಿಂದ ಸೇವಿಸಲ್ಪಡುತ್ತಿರುವವನಾಗಿ, ಬೇಲ ನೇರಳೆ ಮುಂತಾದ ಹಣ್ಣುಗಳ ರಸವನ್ನು ಭಕ್ಷಿಸುವವನಾಗಿ, ದುಃಖನಾಶಕ್ಕೆ ಕಾರಣವಾಗಿರುವ ಪಾರ್ವತೀಪುತ್ರನಾದ ವಿಘ್ನೇಶ್ವರನ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ.

★★★★

*ವಂದೇ ಸತ್ಪುರುಷಾನ್ ಲೋಕೇ ಗುಣಗ್ರಹಣ ತತ್ಪರಾನ್ ।*
*ರಾಜಹಂಸಾ ನಿವ ಜಲಾತ್ ಕ್ಷೀರಗ್ರಹಣ ಕೋವಿದಾನ್ ॥*

ಲೋಕದೊಳು ನೀರು ಬೆರೆಸಿದ ಹಾಲಿನಲ್ಲಿ ನೀರನ್ನು ಬೇರ್ಪಡಿಸಿ ಹಾಲನ್ನು ಮಾತ್ರ ತೆಗೆದುಕೊಳ್ಳುವ ರಾಜಹಂಸಗಳಂತೆ ಗುಣವನ್ನು ಗ್ರಹಿಸುವುದರಲ್ಲಿ ತತ್ಪರರಾಗಿ ಉಳ್ಳ ಸತ್ಪುರುಷರನ್ನು ವಂದಿಸುತ್ತೇನೆ.

★★★★

*ಬಹುಗ್ರಂಥಾನ್ ಸಮಾಲೋಕ್ಯ ಸಾರ ಮುದ್ಧೃತ್ಯ ಕಂಚನ ।*
*ಸುಭಾಷಿತೋಽಯಗ್ರಂಥಿತಃ ಜೀಯಾದ್ಯೂ-ಮಿರವೀಂದುಭಂ ॥*

ಅನೇಕ ಗ್ರಂಥಗಳನ್ನು ನೋಡಿ ಸಾರವನ್ನು ಸಂಗ್ರಹಿಸಿ ಸುಭಾಷಿತವೆಂಬ ಈ ನೀತಿಶಾಸ್ತ್ರವು ರಚಿಸಲ್ಪಟ್ಟಿದೆ. ಇದು ಭೂಮಿ, ಸೂರ್ಯ ಚಂದ್ರ ಮತ್ತು ನಕ್ಷತ್ರಗಳು ಇರುವ ತನಕ ಅಜರಾಮರ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಇದನ್ನು ಕೇಳಿ ಬಾಣನಿಗೆ ದಿಗಿಲು ಹಾರಿತು. ಅವನು ಕೂಡಲೇ ಅವಳ ಕೋಣೆಗೆ ಹೋದನು. ಅಲ್ಲಿ ಉಷೆಯು ಅತಿ ಸುಂದರ ತರುಣನೊಡನೆ ಪಗಡೆಯಾಡುತ್ತ ಕುಳಿತಿದ್ದಳು. ಅಲ್ಲಿಗೆ ಯುದ್ಧ ಸನ್ನದ್ಧರಾಗಿ ಬಂದ ಸೈನಿಕರನ್ನೂ, ಬಾಣನನ್ನೂ ನೋಡಿ ಅನಿರುದ್ಧನು ಥಂಗನೆ ಎದ್ದು ತನ್ನ ಪರಿಘಾಯುಧವನ್ನೆತ್ತಿಕೊಂಡು ಯುದ್ಧ ಮಾಡಿದನು. ಅವನು ಸಿಟ್ಟಿಗೆದ್ದ ಯಮನಂತೆ ಕಾಣಿಸುತ್ತಿದ್ದನು. ಬಾಣನ ಸೈನಿಕರು ಅವನ ಭಯಂಕರ ಹೊಡೆತ ತಿಂದು ಹೆದರಿ ಪಲಾಯನ ಮಾಡಿದರು. ಬಾಣನು ಅನಿರುದ್ಧನನ್ನು ನಾಗಪಾಶದಿಂದ ಬಂಧಿಸಿಬಿಟ್ಟನು. ಅದನ್ನು ನೋಡಿ ಉಷೆಯು ತುಂಬಾ ವ್ಯಥೆಯಿಂದ ಕಣ್ಣೀರು ಸುರಿಸಿದಳು.

ಇತ್ತ ದ್ವಾರಕೆಯಲ್ಲಿ ಅನಿರುದ್ಧನನ್ನು ಕಾಣದೆ ಎಲ್ಲರೂ ಚಿಂತಾಕ್ರಾಂತರಾದರು. ಮಳೆಗಾಲದ ನಾಲ್ಕು ತಿಂಗಳುಗಳು ಕಳೆದರೂ ಅನಿರುದ್ಧನ ಸಮಾಚಾರ ಸಿಕ್ಕಿರಲಿಲ್ಲ. ಆಗ ಅಲ್ಲಿಗೆ ನಾರದರು ಬಂದರು. ಅನಿರುದ್ಧನು ಶೋಣಿತಪುರದಲ್ಲಿ ಬಾಣಾಸುರನ ನಾಗಪಾಶದಿಂದ ಬಂಧಿತನಾದ ವಿಷಯವನ್ನು ತಿಳಿಸಿದರು. ಕೂಡಲೆ ಕೃಷ್ಣನನ್ನು ಮುಂದಿಟ್ಟುಕೊಂಡು ಯಾದವರು ಹನ್ನೆರಡು ಅಕ್ಷೌಹಿಣಿ ಸೈನ್ಯ ಸಮೇತ ಶೋಣಿತಪುರಕ್ಕೆ ಲಗ್ಗೆಯಿಟ್ಟರು. ಬಲರಾಮ, ಪ್ರದ್ಯುಮ್ನ, ಯುಯುಧಾನ, ಸಾಂಬ, ಗದ, ಸಾರಣ, ನಂದ, ಉಪನಂದ, ಭದ್ರ ಮೊದಲಾದವರು ಕೃಷ್ಣನ ಸಂಗಡವಿದ್ದರು. ಅವರು ಶೋಣಿತಪುರವನ್ನು ಮುತ್ತಿದರು. ಯಾದವರು ಅವನ ಕೋಟೆ, ಉದ್ಯಾನ, ಪ್ರಾಕಾರ, ಗೋಪುರಗಳನ್ನು ಧ್ವಂಸ ಮಾಡುವುದನ್ನು ನೋಡಿ ಕ್ರೋಧಮೂರ್ಛಿತನಾದ ಬಾಣನು ತಾನೂ ಹನ್ನೆರಡು ಅಕ್ಷೌಹಿಣಿ ಸೇನೆಯನ್ನು ಕಟ್ಟಿಕೊಂಡು ಪುರದಿಂದ ಹೊರಬಂದನು. ಪುರದ ರಕ್ಷಕನಾದ ಭಗವಾನ್ ರುದ್ರನು ವೃಷಭಾರೂಢನಾಗಿ ಮಕ್ಕಳ ಮತ್ತು ಪ್ರಮಥಗಣಗಳ ಸಮೇತ ರಾಮ, ಕೃಷ್ಣರೊಡನೆ ಯುದ್ಧಕ್ಕೆ ಬಂದನು. ಕೃಷ್ಣ ಶಂಕರರೊಳಗೆ, ಪ್ರದ್ಯುಮ್ನ ಕಾರ್ತಿಕೇಯರೊಳಗೆ, ಕುಂಭಾಂಡ, ಕೂಪಕರ್ಣ ಬಲರಾಮರೊಳಗೆ, ಸಾಂಬಬಾಣ ಪುತ್ರರೊಳಗೆ, ಬಾಣ ಸಾತ್ಯಕಿಯರೊಳಗೆ ತುಮುಲ ಕದನ ನಡೆಯಿತು. ಬ್ರಹ್ಮಾದಿ ದೇವತೆಗಳು, ಮುನಿಗಳು, ಸಿದ್ಧಚಾರಣರು, ಗಂಧರ್ವರು, ಅಪ್ಸರೆಯರು, ಯಕ್ಷರು ಯುದ್ಧವನ್ನು ನೋಡಲು ವಿಮಾನಗಳ ಮೂಲಕ ಆಕಾಶದಲ್ಲಿ ಬಂದು ನಿಂತರು. ಶ್ರೀಕೃಷ್ಣನು ತನ್ನ ಶಾರ್ಙ್ಗಧನುಸ್ಸಿನಿಂದ ಬಿಟ್ಟ ಬಾಣಗಳಿಂದ ಶಂಕರನ ಅನುಚರರನ್ನು ಓಡಿಸಿದನು. ಮಹೇಶ್ವರನೂ ತನ್ನ ಪಿನಾಕ ಧನುಸ್ಸಿನಿಂದ ಮಾಧವನ ಮೇಲೆ ವಿವಿಧಾಸ್ತ್ರಗಳನ್ನು ಪ್ರಯೋಗಿಸಿದನು. ಶೌರಿಯು ಅವುಗಳನ್ನು ತನ್ನ ಪ್ರತ್ಯಸ್ತ್ರಗಳಿಂದ ಶಮನಗೊಳಿಸಿದನು. ಶಿವನ ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದಿಂದ, ವಾಯ್ವಸ್ತ್ರವನ್ನು ಪರ್ವತಾಸ್ತ್ರದಿಂದ, ಆಗ್ನೇಯಾಸ್ತ್ರವನ್ನು ಪರ್ಜನ್ಯಾಸ್ತ್ರದಿಂದ, ಪಾಶುಪತವನ್ನು ವೈಷ್ಣವಾಸ್ತ್ರದಿಂದ ಎದುರಿಸಿ ಅವುಗಳನ್ನು ಉಪಶಮನಗೊಳಿಸಿದನು. ಕೊನೆಗೆ ಜೃಂಭಕಾಸ್ತ್ರವನ್ನು ಪ್ರಯೋಗಿಸಿದಾಗ ಶಂಕರನು ಆಕಳಿಸುತ್ತಾ ರಣರಂಗದಿಂದ ನಿರ್ಗಮಿಸಿದನು. ಶ್ರೀಕೃಷ್ಣನು ಬಾಣಸೈನ್ಯದ ಮೇಲೆ ಖಡ್ಗ, ಗದೆ, ಬಾಣಗಳಿಂದ ದಾಳಿ ಮಾಡಿ ಅದನ್ನು ಧ್ವಂಸ ಮಾಡಿದನು. ಸ್ಕಂದನು ಪ್ರದ್ಯುಮ್ನನ ಶರಗಳಿಂದ ಗಾಸಿಕೊಂಡು ನವಿಲಿನ ಮೇಲೆ ಕುಳಿತುಕೊಂಡು ಯುದ್ಧಭೂಮಿಯಿಂದ ಹೊರಟು ಹೋದನು. ಕುಂಭಾಂಡ, ಕೂಪಕರ್ಣರು ಬಲರಾಮನ ಮುಸಲದ ಹೊಡೆತದಿಂದ ನೆಲಕ್ಕೊರಗಿದರು. ತಮ್ಮ ನಾಯಕರು ಸತ್ತದ್ದನ್ನು ನೋಡಿ ಅವರ ಸೈನ್ಯಗಳು ದಿಕ್ಕಾಪಾಲಾಗಿ ಓಡಿದವು. ತನ್ನ ಸೈನ್ಯವು ನಾಶವಾಗುವುದನ್ನು ಗಮನಿಸಿದ ಬಾಣನು ಅತ್ಯಂತ ಕೋಪದಿಂದ ರಥದ ಮೇಲೆ ಕುಳಿತು ಸಾತ್ಯಕಿಯನ್ನು ಬಿಟ್ಟು ಶ್ರೀಕೃಷ್ಣನ ಮೇಲೆ ಆಕ್ರಮಣ ಮಾಡಿದನು. ಸಾವಿರ ಕೈಗಳ ಬಾಣನು ಐನ್ನೂರು ಬಿಲ್ಲುಗಳಿಂದ ಕಣೆಗಳ ಮಳೆಯನ್ನೇ ಸುರಿಸಿದನು. ಶಾರ್ಙ್ಗಧನ್ವನು ಅವನ ಬಿಲ್ಲುಗಳನ್ನೇ ತುಂಡರಿಸಿದನು. ಅದರ ಜೊತೆಯಲ್ಲೆ ಅವನ ಸಾರಥಿ, ಕುದುರೆಗಳನ್ನು ಕೊಂದು ರಥವನ್ನು ಪುಡಿಮಾಡಿದನು. ಆಗ ಕೋಟರಾ ಎಂಬ ಅವನ ದೇವಮಾತೆಯು ತಲೆಕೂದಲುಗಳನ್ನು ಕೆದರಿಕೊಂಡು, ನಗ್ನಳಾಗಿ ಕೃಷ್ಣನ ಮುಂದೆ ನಿಂತಳು. ಅವಳನ್ನು ನೋಡಿ ಜುಗುಪ್ಸೆಗೊಂಡ ಮುರಾರಿಯು ಮುಖವನ್ನು ತಿರುಗಿಸಿದನು. ಇದೇ ಸರಿಯಾದ ಸಮಯವೆಂದು ಬಾಣನು ಅಲ್ಲಿಂದ ಓಡಿ ಹೋಗಿ ಜೀವವನ್ನು ಉಳಿಸಿಕೊಂಡನು.

ಭೂತಗಣಗಳೆಲ್ಲ ಓಡಿ ಹೋದದ್ದನ್ನು ನೋಡಿ ಮೂರು ಮುಖಗಳಿರುವ ಶೈವಜ್ವರವು ಗರ್ಜಿಸುತ್ತಾ, ಹತ್ತುದಿಕ್ಕುಗಳನ್ನು ಸುಡುವಂತೆ ಈಕ್ಷಿಸುತ್ತಾ ಬಂದಿತು. ಆಗ ಶ್ರೀಕೃಷ್ಣನು ವೈಷ್ಣವ ಜ್ವರವನ್ನು ಅದರ ಮೇಲೆ ಛೂಬಿಟ್ಟನು. ಆ ಎರಡು ಜ್ವರಗಳು ಭಯಂಕರವಾಗಿ ಹೋರಾಡಿಕೊಂಡವು. ವೈಷ್ಣವ ಜ್ವರದ ಬಲದ ಮುಂದೆ ನಿಲ್ಲಲಾರದ ಮಾಹೇಶ್ವರ ಜ್ವರವು ಕೃಷ್ಣನಿಗೆ ಶರಣಾಯಿತು. ಅದು ಅನನ್ಯ ಭಕ್ತಿಯಿಂದ ಪರಮಾತ್ಮನನ್ನು ಸ್ತುತಿಸಿತು. ಪ್ರಸನ್ನನಾದ ಭಗವಂತನು ಅದಕ್ಕೆ ಅಭಯವನ್ನು ನೀಡಿದನು. ಅದು ಅಲ್ಲಿಂದ ಹೊರಟು ಹೋಯಿತು.

ಬಾಣಾಸುರನು ಪುನಃ ರಥವನ್ನೇರಿ ತನ್ನ ಸಾವಿರ ಕೈಗಳಲ್ಲಿ ನಾನಾಯುಧಗಳನ್ನು ಹಿಡಿದುಕೊಂಡು ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಬಂದನು. ವಾಸುದೇವನು ತನ್ನ ಚಕ್ರದಿಂದ ಅವನ ಕೈಗಳನ್ನು ಕತ್ತರಿಸಲಾರಂಭಿಸಿದನು. ಆಗ ಭಕ್ತವತ್ಸಲನಾದ ಭಗವಾನ್ ಶಂಕರನು ಬಂದು ಶ್ರೀಕೃಷ್ಣನನ್ನು ಸ್ತುತಿಸಿ, ಬಾಣನನ್ನು ಉಳಿಸುವಂತೆ ಪ್ರಾರ್ಥಿಸಿದನು. "ಪ್ರಭುವೇ, ಇವನು ನನ್ನ ಪ್ರಿಯ ಭಕ್ತನು. ಇವನಿಗೆ ನಾನು ಅಭಯವನ್ನಿತ್ತಿರುವೆನು. ದೈತ್ಯಪತಿಯಾದ ಪ್ರಹ್ಲಾದನನ್ನು ಅನುಗ್ರಹಿಸಿದಂತೆ ಅವನ ಮರಿ ಮೊಮ್ಮಗನಾದ ಇವನನ್ನೂ ಅನುಗ್ರಹಿಸಿ". ಆಗ ಭಗವಾನ್ ಶ್ರೀಕೃಷ್ಣನೆಂದನು, "ಭಗವಂತನಾದ ಶಂಕರನೆ, ನಿನ್ನಿಷ್ಟವನ್ನು ನಾನು ಮನ್ನಿಸುತ್ತೇನೆ. ಇವನನ್ನು ನಾನು ಕೊಲ್ಲುವುದಿಲ್ಲ. ಯಾಕೆಂದರೆ ಪ್ರಹ್ಲಾದನ ವಂಶದಲ್ಲಿ ಯಾರನ್ನೂ ಕೊಲ್ಲುವುದಿಲ್ಲವೆಂದು ಅವನಿಗೆ ಮಾತು ಕೊಟ್ಟಿದ್ದೇನೆ. ನಿನ್ನ ಅಭೀಪ್ಸೆಯಂತೆ ನಾನು ಅವನ ದರ್ಪವನ್ನು ಮುರಿದಿರುವೆನು. ಭೂಮಿಗೆ ಭಾರವಾದ ಅವನ ಭುಜಗಳಲ್ಲಿ ನಾಲ್ಕನ್ನು ಬಿಟ್ಟು ಮಿಕ್ಕವನ್ನು ಕತ್ತರಿಸಿರುವೆನು. ಇನ್ನು ಮುಂದೆ ಅವನು ಚತುರ್ಭುಜನಾಗಿ ನಿನ್ನ ಪಾರ್ಷದರಲ್ಲಿ ಒಬ್ಬನಾಗುವನು. ಅವನಿಗೆ ನನ್ನಿಂದ, ನನ್ನ ಕಡೆಯವರಿಂದ ಯಾವುದೇ ರೀತಿಯ ಭಯವಿರುವುದಿಲ್ಲ"

ಭಗವಂತನಿಂದ ಅಭಯದೊರೆತ ಮೇಲೆ ಬಾಣನು ತನ್ನ ಮಗಳಾದ ಉಷೆಯನ್ನೂ, ಅಳಿಯನಾದ ಅನಿರುದ್ಧನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ಬಂದು ಶ್ರೀಕೃಷ್ಣನಿಗೆ ಒಪ್ಪಿಸಿದನು. ಮಾಧವನು ರುದ್ರನ ಅನುಮತಿಯನ್ನು ಪಡೆದು ಒಂದು ಅಕ್ಷೌಹಿಣಿ ಸೈನ್ಯ ಸಹಿತನಾದ ಅನಿರುದ್ಧನನ್ನು ಮುಂದುಮಾಡಿಕೊಂಡು ಸಂಗಡಿಗರಾದ ಯಾದವರ ಜೊತೆಯಲ್ಲಿ ದ್ವಾರಕೆಯತ್ತ ಪ್ರಯಾಣ ಬೆಳೆಸಿದನು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**

**"ಮಾನವ ಜನ್ಮ ದೊಡ್ಡದು"**

*ಲೇಖಕರು :* ಶ್ರೀ ಎಲ್ಲೂರು ಶಾಂತಿನಾಥ ರಾವ್

*ಪ್ರಕಾಶಕರು :* ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್, ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, 76 ಬಡಗಬೆಟ್ಟು, ಕುಕ್ಕಿಕಟ್ಟೆ, ಉಡುಪಿ.

ಶ್ರೀ ಎಲ್ಲೂರು ಶಾಂತಿನಾಥ ರಾವ್ (ಎಶಾರಾ) ಇಂಜಿನಿಯರಿಂಗ್ ಪದವಿಯ ನಂತರ ಮಲಪ್ರಭಾ ನೀರಾವರಿ ಯೋಜನೆ, ದಾಂಡೇಲಿಯ ಜಲವಿದ್ಯುತ್ ಯೋಜನೆ ಮತ್ತು ರಾಯಚೂರಿನಲ್ಲಿ ಉಷ್ಣವಿದ್ಯುತ್ ಸ್ಥಾವರಗಳಲ್ಲಿ ಇಂಜಿನಿಯರಾಗಿ ಸೇವೆ ಸಲ್ಲಿಸಿ, 2003ನೇ ಇಸವಿಯಲ್ಲಿ ಸೇವೆಯಿಂದ ನಿವೃತ್ತರಾದರು. ಬಾಲ್ಯದಿಂದಲೇ ಆಧ್ಯಾತ್ಮದ ಕಡೆಗೆ ಇವರ ಒಲವು ಇದ್ದಿತು. ಸುಮಾರು ಮೂವತ್ತು ವರ್ಷಗಳಿಂದ ಉಪನಿಷತ್ತಿನ ಸಾರವಾದ ಬ್ರಹ್ಮಾತ್ಮೈಕತ್ವಜ್ಞಾನವನ್ನು ಶಾಂಕರಭಾಷ್ಯಾನುಸಾರವಾಗಿ ಅಧ್ಯಯನ ಮಾಡಿರುತ್ತಾರೆ. ಹಾಗೂ ಈ ಕುರಿತು ಅನೇಕ ಲೇಖನ ಮತ್ತು ಹಸ್ತಪ್ರತಿಗಳನ್ನು ರಚಿಸಿದ್ದಾರೆ. "ಮಾನವಜನ್ಮ ದೊಡ್ಡದು" ಇದು ಇವರ ಪ್ರಥಮ ಪ್ರಕಟಿತ ಕೃತಿ.

ಈ ಕೃತಿಯಲ್ಲಿ 3 ವಿಭಾಗಗಳಿವೆ :- ಗ್ರಂಥ ಪ್ರವೇಶ, ಗ್ರಂಥಾಂತರಂಗ ಮತ್ತು ಗ್ರಂಥಸಾರಾಂಶ. ಗ್ರಂಥ ಪ್ರವೇಶದಲ್ಲಿ ಲೇಖಕರು ತಿಳಿಸಿದಂತೆ "ನಾವೀಗ ವಿಜ್ಞಾನಯುಗದಲ್ಲಿದ್ದೇವೆ. ಯುಕ್ತಿಯುತವಾಗಿ ವಿಶಾಲವಾಗಿ ಬೆಳೆದಿರುವ ನವೀನ ವಿಜ್ಞಾನವು, ಹುಟ್ಟು ಬದುಕು ಸಾವುಗಳೆಂಬುದು ಬರಿ ರಾಸಾಯನಿಕ ಕ್ರಿಯೆಗಳು ಎನ್ನುವಲ್ಲಿಯವರೆಗೆ ಬೆಳೆದಿದೆ. ಆದರೆ ಇಷ್ಟರಿಂದಲೆ ನಮ್ಮ ಜಿಜ್ಞಾಸೆಯು ತೃಪ್ತಿಗೊಂಡು ಶಮನವಾಗಬಲ್ಲುದೆ? ಇದೊಂದು ಪ್ರಕೃತಿ ಸಹಜಕ್ರಿಯೆ ಎಂದಿಟ್ಟುಕೊಂಡರೂ, ಪೂರ್ತಿ ಸೃಷ್ಟಿಯೇ ಜಡವಸ್ತುಗಳ ಸಮೇತ ಜೀವಜಡವಸ್ತುಗಳೆಲ್ಲವೂ, ಒಂದಿಷ್ಟೂ ಚಾಚೂ ತಪ್ಪದೆ ಅಪವಾದಗಳಾವುವೂ ಇಲ್ಲದೆ, ಒಂದೆರಡು ಹಲಕೆಲವುಗಳಲ್ಲ, ಮತ್ತೇನೆಂದರೆ, ಅನೇಕಾನೇಕ ಅಸಂಖ್ಯ ಭೌತಿಕ, ರಾಸಾಯನಿಕ, ಜೈವಿಕ ನಿಯಮಾನುಸಾರವಾಗಿಯೇ ನಡೆಯುತ್ತಿರುವುದರಿಂದ, ಇದಕ್ಕೆಲ್ಲಾ ಒಬ್ಬ ನಿಯಾಮಕನಿರಬೇಕೆಂಬುದು ಯುಕ್ತಿಯುತವೆನಿಸುವುದಿಲ್ಲವೇ? ಹೀಗೆಂದಾದರೆ, ನಿಯಮಾನುಸಾರ ಸೃಷ್ಟಿಸಿ, ನಿಯಮಾನುಸಾರ ಪೋಷಿಸಿ, ನಿಯಮಾನುಸಾರ ಲಯಗೊಳಿಸುವ ನಿಯಾಮಕನ ಉದ್ದೇಶವಾದರೂ ಏನಿದ್ದೀತು? ಪ್ರಕೃತಿಯನ್ನೇ ಸೃಷ್ಟಿಸಿದ ಪರಮಾತ್ಮನಿಗೆ ಇದು ಪ್ರಕೃತಿ ಸಹಜವೆಂದರೆ ವಿರೋಧಾಭಾಸವಾಗುವುದು"

ಗ್ರಂಥಸಾರಾಂಶದಲ್ಲಿ "ಮಾನವ ಜನ್ಮವು ಅತ್ಯಂತ ದುರ್ಲಭವಾಗಿರುವುದರಿಂದಲೂ, ಇನ್ನೊಮ್ಮೆ ಯಾವಾಗ ದೊರೆಯುವುದೆಂದು ತಿಳಿಯದಿರುವುದರಿಂದಲೂ ಮಾನವಜನ್ಮ ದೊಡ್ಡದು" ಎಂದು ಲೇಖಕರು ತಿಳಿಸುತ್ತಾರೆ.

ಟ್ರಸ್ಟಿನ ಸಂಚಾಲಕರಾದ ಡಾ। ವೈ.ಸುದರ್ಶನ ರಾವ್ ಇವರ 'ಪ್ರಕಾಶಕರ ಮಾತು' ಹೀಗಿದೆ :- "ಈ ಪುಸ್ತಕದಲ್ಲಿ ಲೇಖಕರು, ಈ ಮಾನವಜನ್ಮವು ಸುಖ ಲೋಲುಪತೆಗಳನ್ನು ಅನುಭವಿಸಲಿಕ್ಕಾಗಿ ಮಾತ್ರ ಇರದೆ, ಆತ್ಮಾನುಭವವನ್ನು ಪಡೆಯಲಿಕ್ಕಾಗಿ ಪಡೆದಂತಹಾ ಶ್ರೇಷ್ಠ ಜನ್ಮವೆಂದು, ಸನಾತನ ಧರ್ಮದ ಉದ್ಗ್ರಂಥಗಳಾದ ಉಪನಿಷತ್ತುಗಳಲ್ಲಿ ಮತ್ತು ಭಗವದ್ಗೀತೆಯಲ್ಲಿ ಉಲ್ಲೇಖವಾಗಿರುವ ಶ್ಲೋಕಗಳನ್ನು ಉದ್ಧರಿಸಿ ನಿರೂಪಿಸಿದ್ದಾರೆ. ಅದರೊಂದಿಗೆ ಶ್ರೀ ರಾಮಕೃಷ್ಣ ಪರಮಹಂಸರಂಥಹ ಜ್ಞಾನಿಗಳ ಉಪದೇಶಗಳನ್ನೂ ಪ್ರಸ್ತಾವಿಸಿದ್ದಾರೆ. ಆಳವಾದ ವಿಷಯ ಸಂಗ್ರಹಣೆ ಹಾಗೂ ನಿಖರವಾದ ಬರವಣಿಗೆಯಿಂದಾಗಿ ಈ ಪುಸ್ತಕವು ವಿಶೇಷತೆಯನ್ನು ಹೊಂದಿದೆ. ಈ ಪುಸ್ತಕದಲ್ಲಿ ಪ್ರಸ್ತಾವಿಸಿದ ವಿಷಯಗಳು ಓದುಗರ ಮನಮುಟ್ಟಿ ಅವರ ಜೀವನಶೈಲಿಯಲ್ಲಿ ತುಸುವಾದರೂ ಬದಲಾವಣೆ ತರಲಿ ಎಂಬುದು ನಮ್ಮ ಕಳಕಳಿ".

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಪಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಕೆ. ಬಿ. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

## ಉಡುಪಿಯ ಶ್ರೀಶಾರದಾ ಟ್ರೋಫಿಯು ಯುವಕರ ಸೌಹಾರ್ದ ಕ್ರೀಡಾ ಕೂಟವಾಗಿದೆ : ಬೊಕ್ಕಸ ಚಂದ್ರಶೇಖರ ರಾವ್

(....1ನೇ ಪುಟದಿಂದ)

ವಿನ್ನರ್ಸ್ : ಕಾರ್ತಿಕ್ ತಂಡ
ರನ್ನರ್ಸ್: ಅಭಿಷೇಕ್ ತಂಡ

ಶ್ರೀಶಾರದಾ ಟ್ರೋಫಿಯೊಂದಿಗೆ ನಗದು ಬಹುಮಾನ ಈ ಬಾರಿ ರೂ.5,001. ನಗದು ಬಹುಮಾನವನ್ನು ಪ್ರತೀ ವರ್ಷದಂತೆ ಈ ಬಾರಿಯೂ ಅಲೆವೂರು ಶ್ಯಾಮರಾವ್ ಅವರ ಮಾತಾಪಿತರುಗಳಾದ ದಿ| ಭುಜಂಗ ರಾವ್ ಮತ್ತು ದಿ| ಶಾಂತಾದೇವಿ ಸ್ಮರಣಾರ್ಥ ರೂ.3,001ನ್ನು ನೀಡಿದ್ದರು. ಇವರ ಜೊತೆಗೆ ಈ ಬಾರಿ ಡಾ| ಬಿ.ಎಚ್.ಆನಂದ ರಾವ್ ಮಣಿಪಾಲ, ಡಾ| ಪ್ರಶಾಂತ್ ಮೋಹನ್ ಹಾಗೂ ಡಾ| ಸಂದೀಪ ರಾವ್ ರೂ.2,000 ನೀಡಿದ್ದಾರೆ.

ಸಂಘಟಕರನ್ನು ಅಭಿನಂದಿಸಿದರು. ಕೋಶಾಧಿಕಾರಿ ಡಾ| ವೈ.ಎಸ್.ರಾವ್ ಮಾತ ನಾಡಿ ಇಲ್ಲಿಯ ಯುವಕರು ಉದ್ಯೋಗಕ್ಕಾಗಿ ದೂರದ ಊರುಗಳಲ್ಲಿ ಇದ್ದರೂ, ಈ ಒಂದು ಪಂದ್ಯಾಟಕ್ಕೆ ಉಡುಪಿಯಲ್ಲಿ ಪ್ರತಿ ವರ್ಷ ಸೇರುತ್ತಿದ್ದಾರೆ ಎಂದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಲ್ಲದೆ ಉಪಾಧ್ಯಕ್ಷರಾದ ಎಸ್.ಎಮ್. ರಾವ್, ಕೋಶಾಧಿಕಾರಿ ಡಾ| ವೈ.ಸುದರ್ಶನ್ ರಾವ್, ಕಾರ್ಯದರ್ಶಿ ಬಿ.ಕೃಷ್ಣಮೂರ್ತಿ ರಾವ್, ಯುವವೇದಿಕೆಯ ಅಧ್ಯಕ್ಷ ಮಂಜುನಾಥ ಹೆಬ್ಬಾರ್, ಕ್ರೀಡಾ ವೇದಿಕೆಯ ಅಧ್ಯಕ್ಷ ಪಿ.ಎಮ್.ನಾಗರಾಜ್ ಉಪಸ್ಥಿತ ರಿದ್ದರು. ಬಹುಮಾನಿತರ ವಿವರವನ್ನು




ಶ್ರೀ ಶಾರದಾ ಟ್ರೋಫಿ-2012ರ ವಿನ್ನರ್ಸ್ ಜೆಸಿಟಿ ರಾಯಲ್ಸ್ ತಂಡ, ಬೆಂಗಳೂರು

ರನ್ನರ್ಸ್ ಅಪ್‌ನಲ್ಲಿ ಟ್ರೋಫಿಯ ಜೊತೆಗೆ ನಗದು ಬಹುಮಾನ ರೂ.3,001. ನಗದು ಬಹುಮಾನ ಪ್ರಾಯೋಜಕರಾಗಿ ಅಲೆವೂರು ಶ್ಯಾಮರಾವ್ ತನ್ನ ಮಾತಾ-ಪಿತೃಗಳಾದ ದಿ| ಭುಜಂಗ ರಾವ್ ಮತ್ತು ದಿ| ಶಾಂತಾದೇವಿ ಸ್ಮರಣಾರ್ಥ ಈ ಬಾರಿಯೂ ರೂ.2,001 ನೀಡಿದ್ದು, ಇವರ ಜೊತೆಗೆ ಡಾ| ಬಿ.ಎಚ್. ಆನಂದ ರಾವ್, ಡಾ| ಪ್ರಶಾಂತ್ ಮೋಹನ್ ಹಾಗೂ ಡಾ| ಸಂದೀಪ ರಾವ್ ಜೊತೆಯಾಗಿ ರೂ.1,000 ನೀಡಿದ್ದಾರೆ. ಮತ್ತು ವೈಯಕ್ತಿಕ ಬಹುಮಾನ ಹಾಗೂ ಸೆಮಿಫೈನಲ್ ಪ್ರವೇಶಿಸಿದ ಎರಡು ತಂಡಗಳಿಗೂ ಅವರು ನಗದನ್ನು ನೀಡಿರುತ್ತಾರೆ. ಉಳಿದಂತೆ ಇತರ ಪ್ರಾಯೋಜಕ ರಾಗಿ ಸಹಕರಿಸಿದ ಶ್ರೀಶಾರದಾ ಕ್ರೆಡಿಟ್ ಕೋಅಪರೇಟಿವ್ ಸೊಸೈಟಿ ಉಡುಪಿ, ಮಂಜುನಾಥ ಹೆಬ್ಬಾರ್, ಕೆ.ಗಣೇಶ್ ಹೆಬ್ಬಾರ್, ಸಿ.ದೇವರಾವ್, ಬಿ.ವಾಸುದೇವ ರಾವ್, ಬಿ.ಕೃಷ್ಣಮೂರ್ತಿ ರಾವ್, ಸುರೇಶ್ ರಾವ್ ಕುತ್ಪಾಡಿ ಇವರೆಲ್ಲರಿಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕೃತಜ್ಞತೆ ವ್ಯಕ್ತಪಡಿಸಿದೆ. ಪಂದ್ಯದ ನಿರ್ಣಾಯಕ ರಾಗಿ ಶ್ರೀ ಪ್ರವೀಣ ಉಡುಪಿ, ಸದಾಶಿವ ಮಣಿಪಾಲ, ಉಮೇಶ ಹಿರಿಯಡ್ಕ, ಉಮೇಶ ಸಾಂದೀಪನಿ ಶಾಲೆ, ಕಾರ್ತಿಕ ಮತ್ತು ಶರತ್ ಮಣಿಪಾಲ ಸಹಕರಿಸಿದರು.

ಸಂಜೆ ನಡೆದ ಶ್ರೀಶಾರದಾ ಟ್ರೋಫಿಯ ಸಮಾರೋಪ ಸಮಾರಂಭದಲ್ಲಿ ಉಡುಪಿ ನಗರಸಭಾ ಸದಸ್ಯ ಶ್ರೀ ದೇವೇಂದ್ರ ಪ್ರಭು ಹಾಗೂ ಬೊಕ್ಕಸ ಚಂದ್ರಶೇಖರ ರಾವ್ ಅತಿಥಿಗಳಾಗಿದ್ದು ವಿಜೇತರಿಗೆ ಬಹುಮಾನ ವಿತರಿಸಿದರು. ನಮ್ಮ ಸಮಾಜ ದವರಾದ ಕರ್ಣಾಟಕ ಬ್ಯಾಂಕಿನ ಡಿ.ಜಿ.ಎಮ್. ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಬೆಂಗಳೂರು ತಂಡವು ಶ್ರೀಶಾರದಾ ಟ್ರೋಫಿ ಪಡೆದಿದ್ದು ನನಗೆ ಸಂತೋಷ ತಂದಿದೆ ಎಂದರು. ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್.ರಾವ್ ಎಲ್ಲರನ್ನು ಸ್ವಾಗತಿಸಿ, ಸತತ 22 ವರ್ಷಗಳಿಂದ ನಡೆಸಲಾಗುವ ಶ್ರೀಶಾರದಾ ಟ್ರೋಫಿಯ ಪ್ರಭಾಕರ ಬಂಡಿಯವರು ನೀಡಿದರು. ಕೊನೆಯಲ್ಲಿ ಟಿ.ವಿಶ್ವನಾಥ ಶ್ಯಾನುಭಾಗ್ ಧನ್ಯವಾದವಿತ್ತರು. ಕಾರ್ಯಕ್ರಮವನ್ನು ಕೃಷ್ಣಕುಮಾರ್ ರಾವ್ ಮಟ್ಟು ನಿರೂಪಿಸಿದರು.

**ಮಹಿಳಾ ವಿಭಾಗದಿಂದ ಒಳಾಂಗಣ ಕ್ರೀಡಾ ಸ್ಪರ್ಧೆಗಳು :** ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಮಹಿಳಾ ವಿಭಾಗದ ವತಿಯಿಂದ ಮಹಿಳೆಯರು ಹಾಗೂ ಮಕ್ಕಳಿಗಾಗಿ ತಾ.5-2-2012ರಂದು ಶ್ರೀಶಾರದಾ ಮಂಟಪದಲ್ಲಿ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಬೆಳಗ್ಗೆ ಸುಮಾರು 10-30 ಗಂಟೆಗೆ ಇದರ ಉದ್ಘಾಟನೆಯನ್ನು ಶ್ರೀಮತಿ ಮೊರಾಜೆ ಶಕುಂತಲ ಕೃಷ್ಣರಾವ್ ಅಲೆವೂರು, ಶ್ರೀಮತಿ ತುಳಸಿ ವಾಸುದೇವರಾವ್ ಉಡುಪಿ, ಶ್ರೀಮತಿ ನಿರ್ಮಲ ಜಯರಾಮ ಶಾಸ್ತ್ರಿ ಪರ್ಕಳ ಹಾಗೂ ಶ್ರೀಮತಿ ಉಷಾ ಮೋಹನ್‌ದೇವ್ ಉಡುಪಿ ಇವರೆಲ್ಲ ದೀಪ ಬೆಳಗಿಸುವುದರ ಮೂಲಕ ನಡೆಸಿಕೊಟ್ಟರು. ಪಲ್ಲವಿ ಸುಭಾಷ್‌ರಾವ್ ಹಾಗೂ ಪ್ರೇರಣ ಸಂತೋಷ್ ರಾವ್ ಪ್ರಾರ್ಥಿಸಿದರು.

ನಮ್ಮ ಸಮಾಜದ ಮಹಿಳೆಯರು ಮತ್ತು ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ಬಹಳ ಉತ್ಸಾಹ ಮತ್ತು ಸ್ಪರ್ಧಾ ಮನೋಭಾವದಿಂದ ಈ ಕ್ರೀಡೆ ಗಳಲ್ಲಿ ಪಾಲ್ಗೊಂಡರು.

ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಮೊರಾಜೆ ಶಕುಂತಲ ಕೃಷ್ಣರಾವ್, ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಬಿ.ಕೃಷ್ಣಮೂರ್ತಿರಾವ್, ಅಂಬಲಪಾಡಿ, ಖಜಾಂಚಿ ಡಾ| ವೈ. ಸುದರ್ಶನ ರಾವ್ ಉಡುಪಿ, ಮಹಿಳಾ ವಿಭಾಗದ ಶ್ರೀಮತಿ ಉಷಾ ಮೋಹನ್‌ದೇವ್ ಹಾಗೂ ಶ್ರೀಮತಿ ಉಷಾ ಶ್ಯಾನುಭಾಗ್ ಇವರು ವಿಜೇತರಿಗೆ ಬಹುಮಾನ ವಿತರಿಸಿದರು. ಶ್ರೀಮತಿ ಸಂಗೀತ ಸುಭಾಷ್ ಉಡುಪಿ ಅತಿಥಿಗಳನ್ನು ಸ್ವಾಗತಿಸಿದರು, ಶ್ರೀಮತಿ ಪ್ರೀತಿ ಸಂತೋಷ್‌ರಾವ್, ಇಂದ್ರಾಳಿ ಮತ್ತು ಶ್ರೀಮತಿ ವಿದ್ಯಾ ಸುದರ್ಶನ್‌ರಾವ್ ಉಡುಪಿ ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ಪ್ರಸನ್ನಲಕ್ಷ್ಮೀ ಪ್ರಕಾಶ್ ರಾವ್ ಮಣಿಪಾಲ ಧನ್ಯವಾದವಿತ್ತರು.

## ಮಹಿಳಾ ವಿಭಾಗದಿಂದ ನಡೆದ ಒಳಾಂಗಣ ಕ್ರೀಡಾ ಸ್ಪರ್ಧೆಯ ಬಹುಮಾನಿತರು

**3 ವರ್ಷದೊಳಗಿನ ಮಕ್ಕಳಿಗೆ**

**ಚಾಕಲೇಟ್ ಹೆಕ್ಕುವುದು** : ಪ್ರಥಮ - ಪ್ರಜ್ವಲ್ ಗಣೇಶ್, ಮಣಿಪಾಲ
ದ್ವಿತೀಯ - ಅನನ್ಯ ಕಿರಣ್‌ರಾವ್, ಬ್ರಹ್ಮಾವರ

**3ರಿಂದ 5 ವರ್ಷದೊಳಗಿನ ಮಕ್ಕಳಿಗೆ**

**ಬಾಲ್ದಿಗೆ ಚೆಂಡು ಹಾಕುವುದು** : ಪ್ರಥಮ - ಸುಧಾಂಶು ಬಾಲಕೃಷ್ಣ ರಾವ್, ಪಡುಬಿದ್ರಿ
ದ್ವಿತೀಯ - ಆರುಂಧತಿ ಮೋಹನ್, ಕಟಪಾಡಿ

**ಕಪ್ಪೆ ಜಿಗಿತ** : ಪ್ರಥಮ - ಆರುಂಧತಿ ಮೋಹನ್, ಕಟಪಾಡಿ
ದ್ವಿತೀಯ - ಸುಧಾಂಶು ಬಾಲಕೃಷ್ಣ ರಾವ್, ಪಡುಬಿದ್ರಿ

**1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ**

**ಬಾಟಲಿಗೆ ನೀರು ತುಂಬಿಸುವುದು** : ಪ್ರಥಮ - ಪ್ರೇರಣ ಸಂತೋಷ್‌ರಾವ್, ಇಂದ್ರಾಳಿ
ದ್ವಿತೀಯ - ಅನನ್ಯ ಮನೋಹರ ಶಾಸ್ತ್ರಿ ಬನ್ನಂಜೆ

**ಮಣಿ ಹೆಕ್ಕುವುದು** : ಪ್ರಥಮ - ಅಕ್ಷತಾ ಡಿ.ಹೆಬ್ಬಾರ್, ಹಿರಿಯಡ್ಕ
ದ್ವಿತೀಯ - ಶ್ರೇಯಾ ಸತೀಶ್‌ರಾವ್, ಮಲ್ಲಮಾರು
ಮತ್ತು ರೋಹನ್ ಕಾಶೀನಾಥ ರಾವ್, ಸಾಲಿಗ್ರಾಮ

**4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ**

**ಮಣಿ ಪೋಣಿಸುವುದು** : ಪ್ರಥಮ - ಪ್ರಣಮ್ಯ ರವೀಂದ್ರ ಭಂಡಿ, ಪೆರ್ಡೂರು
ದ್ವಿತೀಯ - ಸ್ವಾತಿ ವಾಸುದೇವ ರಾವ್, ಹಿರಿಯಡ್ಕ

**ಸ್ಮರಣ ಶಕ್ತಿ** : ಪ್ರಥಮ - ಸುದೀಕ್ಷ್ಣ ಬಾಲಕೃಷ್ಣ ರಾವ್, ಪಡುಬಿದ್ರಿ
ದ್ವಿತೀಯ - ಸೂರಜ್ ಶ್ರೀನಿವಾಸ್, ಉಡುಪಿ

**7ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ**

**ಚೂಡಿದಾರ್ ಶಾಲಿಗೆ ರಬ್ಬರ್ ಬ್ಯಾಂಡನ್ನು ಸುತ್ತುವುದು** : ಪ್ರಥಮ - ಅಶ್ವಿನಿ ಡಿ.ಹೆಬ್ಬಾರ್, ಹಿರಿಯಡ್ಕ
ದ್ವಿತೀಯ - ಚೈತ್ರಾ ಕುಮಾರ್ ರಾವ್ ಕಡಿಯಾಳಿ

**ಸ್ಕಿಪ್ಪಿಂಗ್ ರೇಸ್** : ಪ್ರಥಮ - ಚೈತ್ರಾ ಕುಮಾರ್ ರಾವ್, ಕಡಿಯಾಳಿ
ದ್ವಿತೀಯ - ಶ್ರವಣ್‌ಕುಮಾರ್, ಹಿರಿಯಡ್ಕ

**ಪಿ.ಯು.ಸಿ.ಯಿಂದ ಡಿಗ್ರಿಯವರೆಗೆ**

**ಸೀರೆ ಮಡಚುವುದು** : ಪ್ರಥಮ - ಅಖಿಲಾ ಪ್ರವೀಣ್, ಸುರತ್ಕಲ್
ದ್ವಿತೀಯ - ಶ್ರೀರಕ್ಷಾ ಶ್ರೀನಿವಾಸ್ ರಾವ್, ಉಡುಪಿ

**ಮಹಿಳೆಯರಿಗಾಗಿ**

**ಪಾಸಿಂಗ್‌ದ ಬಾಲ್** : ಪ್ರಥಮ-ಶ್ರೀಮತಿ ವಾಣಿ ರವೀಂದ್ರ ಭಂಡಿ, ಪೆರ್ಡೂರು
ದ್ವಿತೀಯ-ಶ್ರೀಮತಿ ಶ್ರೀಲತಾ ಪ್ರಕಾಶ್‌ರಾವ್, ಉಡುಪಿ

**60ರಿಂದ 70 ವರ್ಷದ ಮಹಿಳೆಯರಿಗಾಗಿ**

**ಹಗ್ಗದ ಗಂಟು ಬಿಡಿಸುವುದು**: ಪ್ರಥಮ-ಶ್ರೀಮತಿ ಜಾನಕಿ ಶಶಿಕಾಂತರಾವ್, ದೊಡ್ಡಣಗುಡ್ಡೆ
ದ್ವಿತೀಯ-ಶ್ರೀಮತಿ ಕುಮುದ, ಕುಂಭಾಶಿ

**70 ವರ್ಷ ಮೇಲ್ಪಟ್ಟ ಮಹಿಳೆಯರಿಗಾಗಿ**

**ನವಧಾನ್ಯಗಳನ್ನು ಗುರುತಿಸುವುದು** : ಪ್ರಥಮ-ಶ್ರೀಮತಿ ವಿಲಾಸಿನಿ, ಮಣಿಪಾಲ
ದ್ವಿತೀಯ-ಶ್ರೀಮತಿ ಸುಶೀಲಕ್ಕ, ಉಡುಪಿ.

## ಮನೋಹರಪ್ರಸಾದ್ ಇವರಿಗೆ ಬನ್ನಂಜೆ ರಾಮಾಚಾರ್ಯ ಸಂಸ್ಮರಣಾ ಪುರಸ್ಕಾರ



ಬ್ರಹ್ಮಗಿರಿ ಲಯನ್ಸ್ ಭವನದಲ್ಲಿ ರವಿವಾರ ತಾ.5-2-2012ರಂದು ಕಾಪು ವಿದ್ಯಾನಿಕೇತನ ಶಿಕ್ಷಣ ಸಮೂಹ ಸಂಸ್ಥೆಗಳು, ಹಿರಿಯಡಕ ಕೆ.ಸತೀಶ್ಚಂದ್ರ ಹೆಗ್ಡೆ ಸ್ಮಾರಕ ಗೀನ್ ಪಾರ್ಕ್ ಸೆಂಟ್ರಲ್ ಶಾಲೆ, ಕಿನ್ನಿಮೂಲ್ಕಿಯ ಪಡಮನ್ನೂರು ಪ್ರಕಾಶನ ಆಯೋಜಿಸಿದ ಬನ್ನಂಜೆ ರಾಮಾಚಾರ್ಯ ಸಂಸ್ಮರಣಾ ಸಮಾರಂಭದಲ್ಲಿ ಐವರು ಪತ್ರಕರ್ತರಿಗೆ ಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರು ಪತ್ರಿಕಾ ಪುರಸ್ಕಾರ ಪ್ರದಾನ ಮಾಡಿದರು.

ಉದಯವಾಣಿ ಮಂಗಳೂರು ಸುದ್ದಿ ವಿಭಾಗ ಮುಖ್ಯಸ್ಥ ಮನೋಹರ ಪ್ರಸಾದ್, ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ದಾಮೋದರ ಐತಾಳ, ವಿಜಯ ಕರ್ನಾಟಕದ ಉಪಸಂಪಾದಕಿ ಸೀತಾಲಕ್ಷ್ಮೀ ಕರ್ಕಿಕೋಡಿ, ಹಿರಿಯ ವರದಿಗಾರ ಮಹಮ್ಮದ್ ಆರೀಫ್ ಪಡುಬಿದ್ರಿ, ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪುರಸ್ಕೃತರ ಪರವಾಗಿ ಮನೋಹರ್ ಪ್ರಸಾದ್ ಮತ್ತು ದಾಮೋದರ ಐತಾಳ್ ಮಾತನಾಡಿದರು.

ಈ ಪತ್ರಕರ್ತರ ಸನ್ಮಾನ ಸಮಾರಂಭವು ಅಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಆಕರ್ಷಿಸಿ, ಔಚಿತ್ಯಪೂರ್ಣವಾಗಿ ನೆರವೇರಿತು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು : ವಾರ್ಷಿಕೋತ್ಸವ



ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾ.22-01-2012 ರವಿವಾರದಂದು ಶ್ರೀಸಭಾದಲ್ಲಿ ಜರುಗಿತು. ಸಾಮೂಹಿಕ ಲಲಿತ ಸಹಸ್ರನಾಮದ ನಂತರ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮೊದಲಿಗೆ ಶ್ರೀಸಭಾದ ಅಧ್ಯಕ್ಷರಾದ ಶ್ರೀ ಎನ್.ಕೆ.ಜಗನ್ನಿವಾಸ ರಾವ್ ರವರು ಸಭಾದ ಆಡಳಿತ ಮಂಡಳಿಯ ಸದಸ್ಯರನ್ನು ಹಾಗೂ ಸಭಾದ ಸದಸ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರು 2010-11ನೇ ಸಾಲಿನ ವರದಿಯನ್ನು ಮಂಡಿಸಿದರು. ಸದಸ್ಯರ ಸಂದೇಹಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡಿ ವರದಿಗಳನ್ನು ಹಾಗೂ 2011-12ರ ಅಂದಾಜು ಆಯವ್ಯಯ ಪಟ್ಟಿಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ವೇದಿಕೆಯಲ್ಲಿ ಉಪಾಧ್ಯಕ್ಷರುಗಳಾದ ಶ್ರೀ ಸಿ.ಎಸ್. ರಾವ್, ಡಾ| ಎ.ಪಿ.ಕೃಷ್ಣ, ಜೊತೆ ಕಾರ್ಯದರ್ಶಿ ಶ್ರೀ ಬಿ.ಎಸ್.ಅನಿಲ್ ರಾವ್, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಶ್ರೀಸಭಾದ ಆಂತರಿಕ ಲೆಕ್ಕ ಪರಿಶೋಧಕರಾದ ಶ್ರೀ ಕೆ. ನಾಗರಾಜ ಶರ್ಮರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಬೆಳಿಗ್ಗೆ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ವಿವಿಧ ಸ್ಪರ್ಧೆಗಳು ನಡೆದರೆ ಭೋಜನ ನಂತರ ಶ್ರೀ ನಾಗರಾಜ ವರ್ಕಾಡಿ ನಿರ್ದೇಶನದ ''ಪುಣ್ಯಕೋಟಿ'' ಎಂಬ ಯಕ್ಷ ರೂಪಕ, ಸಿಂಚನಾ ಎಸ್.ರಾವ್, ಪ್ರೀತಿಕಾ ಹರ್ಷಕುಮಾರ್, ಪೂರ್ವಿ ರಾವ್ ಹಾಗೂ ವಂದನಾ ರಾಣಿಯವರ ನೃತ್ಯ ಪ್ರದರ್ಶನ ಹಾಗೂ 'ಮೂರ್ಖ ಶಿಷ್ಯರ ತರ್ಲೆ ಉತರಗಳು' ಎಂಬ ಹಾಸ್ಯ ಪ್ರಹಸನಗಳು ನಡೆದವು. ಬಹುಮಾನ ವಿತರಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀಮತಿ ಅರುಣಾ ಸೋಮಶೇಖರ್ ಕಾರ್ಯಕ್ರಮ ಸಂಯೋಜಿಸಿದರೆ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ನಾಗರಾಜ್ ವರ್ಕಾಡಿ ವಂದಾನರ್ಪಣೆಗೈದರು.

**- ಪಿ.ಶ್ರೀಕಾಂತರಾವ್**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬೆಜೈ ಚರ್ಚ್ ರಸ್ತೆ, ಮಂಗಳೂರು.

## ಅದ್ವೈತ-ವಿಜ್ಞಾನ ಎರಡೂ ಒಂದೇ : ಬಿ.ಎಂ.ಹೆಗ್ಡೆ

ಇವತ್ತು ಶಂಕರಚಾರ್ಯರ ಸಿದ್ಧಾಂತಗಳನ್ನು ನಾವು ಮರೆಯುತ್ತಿದ್ದೇವೆ. ಆದರೆ ಅವರು ಪಾಶ್ಚಾತ್ಯರಿಗೆ ಹತ್ತಿರವಾಗುತ್ತಿದ್ದಾರೆ. ಅದ್ವೈತ ಸಿದ್ಧಾಂತ ಹಾಗೂ ವಿಜ್ಞಾನ ಎರಡೂ ಒಂದೇ. ಪಂಥಿದ ದ್ವೇಷವಿರಬಾರದು. ಆದರೆ ಒಂದು ವಿಷಯದ ಬಗ್ಗೆ ವಿಭಿನ್ನ ದೃಷ್ಟಿಕೋನಗಳಿಂದ ಅವಲೋಕಿಸಿದಾಗ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಡಾ| ಬಿ.ಎಂ.ಹೆಗ್ಡೆ ಹೇಳಿದರು.

ನಗರದ ಪುರಭವನದಲ್ಲಿ ಶನಿವಾರ ಸಂಜೆ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಆಧ್ಯಾತ್ಮ ಪುರುಷ ಶ್ರೀ ಆದಿಶಂಕರಾಚಾರ್ಯರ ಜೀವನ ವೃತ್ತಾಂತ ಕುರಿತ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಾಟಕದಿಂದ ಲೋಕ ಪರಿವರ್ತನೆ ಆಗಬೇಕಾದರೆ ಅದನ್ನು ಅಭಿನಯಿಸಿ ತೋರಿಸಬೇಕು. ಇದು ನಮ್ಮ ಹಾಗೂ ನಮ್ಮವರ ಆಶಯ, ನಿಲುವುಗಳನ್ನು ಅರಿತುಕೊಳ್ಳುವುದಕ್ಕೆ ಅನುವಾಗುತದೆ ಎಂದು ಅವರು ನುಡಿದರು.

ಮಂಗಳೂರು ವಿಮಾನ ನಿಲ್ದಾಣದ ನಿರ್ದೇಶಕ ಎಂ.ಆರ್.ವಾಸುದೇವ ರಾವ್ ಅಧ್ಯಕ್ಷತೆ ವಹಿಸಿದ್ದರು. ಐಬಿಯ ಮುಖ್ಯಸ್ಥ ಅನಿಲ್, ಶ್ರೀ ಸುಬ್ರಹ್ಮಣ್ಯ ಸಭಾದ ಎ.ಸಿ.ಕೃಷ್ಣ, ನಮ್ಮವರು ಸಂಘದ ನಾಗೇಂದ್ರ, ಗುರುರಾಜ್ ಮೊದಲಾದವರು ಉಪಸ್ಥಿತರಿದ್ದರು.


ನಾಟಕವನ್ನು ರಚಿಸಿ ನಿರ್ದೇಶಿಸಿದ ಬೈಲೂರು ಬಾಲಚಂದ್ರರಾವ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ತಂಡದ ಇಬ್ಬರು ಕಲಾವಿದರನ್ನು ಸನ್ಮಾನಿಸಲಾಯಿತು.

ಭಾರತೀಯ ವಿದ್ಯಾಭವನ, ಸುಬ್ರಹ್ಮಣ್ಯ ಸಭಾ ಒಟ್ಟಾಗಿ ನಾಟಕವನ್ನು ಪ್ರಾಯೋಜಿಸಿದ್ದವು. ಮುಂಬಯಿಯಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಕೊಂಡ ಕಲಾವಿದರು ನಾಟಕವನ್ನು ಆರನೇ ಪ್ರಯೋಗವಾಗಿ ಮಂಗಳೂರಿನಲ್ಲಿ ಪ್ರಸ್ತುತ ಪಡಿಸಿದರು.

ಒಂದೂವರೆ ವರ್ಷದ ಮಗುವಿನಿಂದ ಹಿಡಿದು ಅರುವತ್ತು ವರ್ಷ ಹರೆಯದವರೆಗಿನ ಸುಮಾರು 40 ಮಂದಿ ಕಲಾವಿದರು ಭಾಗವಹಿಸಿದ್ದರು. ಹೆಚ್ಚಿನವರು ಮಹಿಳೆಯರು. ಕೆಲವರು ಪುಟ್ಟ ಮಕ್ಕಳು.

ಮುಂಬಯಿ ಕಲಾ ತಂಡದವರು ಶನಿವಾರದಂದು ಬೆಳಿಗ್ಗೆ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ಆಗಮಿಸಿದಾಗ ಕಾರ್ಯದರ್ಶಿ ಕರುಣಾ ರಾವ್ ಬೆಳ್ಳೆ ಹಾಗೂ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್‌ರವರು ಆತ್ಮೀಯವಾಗಿ ಬರಮಾಡಿಕೊಂಡು ಕಾಫಿ, ತಿಂಡಿ, ಭೋಜನ ಹಾಗೂ ಉಳಕೊಳ್ಳುವ ವ್ಯವಸ್ಥೆಯನ್ನು ಮಾಡಿದರು.

**- ಪಿ. ಶ್ರೀಕಾಂತರಾವ್**




## ಶ್ರೀ ಕೆ. ಎಸ್.ರವೀಂದ್ರರಾವ್‌ರಿಗೆ ನಾಗರಿಕ ಸನ್ಮಾನ



ಕಳೆದ 29 ವರ್ಷಗಳಿಂದ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಕೆ.ಎಸ್. ರವೀಂದ್ರರಾವ್, ದೂರ್ವಾಸಪುರ (ಶಿವಮೊಗ್ಗ ಜಿಲ್ಲೆ) ಪ್ರಥಮ ದರ್ಜೆ ಸಹಾಯಕರು ಇವರ ಪ್ರಾಮಾಣಿಕ ಸೇವೆ ಹಾಗೂ ಕಾರ್ಯದಕ್ಷತೆಯನ್ನು ಗುರುತಿಸಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಶಾಸಕರಾದ ಶ್ರೀ ಕಿಮ್ಮನೆ ರತ್ನಾಕರ್‌ರವರ ಅಧ್ಯಕ್ಷತೆಯಲ್ಲಿ ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಜರುಗಿದ 56ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ''ನಾಗರಿಕ ಸನ್ಮಾನ'' ನೀಡಿ ಗೌರವಿಸಲಾಯಿತು.

ಈ ಸಮಾರಂಭದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಮೀನಾಕ್ಷಿ ರಾಮಪ್ಪ, ಪುರಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ವೆಂಕಟಪ್ಪ, ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀಮತಿ ಶೃತಿ ವೆಂಕಟೇಶ್, ಶ್ರೀ ಸುಂದರೇಶ್ ಟಿ.ಎಲ್., ತಹಶೀಲ್ದಾರ್ ಶ್ರೀ ಡಿ.ಟಿ.ನಟೇಶ್, ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ| ಕರೀಗೌಡ ಬೀಚನ ಹಳ್ಳಿ ಹಾಗೂ ತಾಲ್ಲೂಕಿನ ಪ್ರಮುಖರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೆದಿಂಜೆಯಲ್ಲಿ ಸನ್ಮಾನ ಹಾಗೂ ವಿದಾಯ ಸಮಾರಂಭ



ಕೆದಿಂಜೆ ಶ್ರೀ ವಿದ್ಯಾಬೋಧಿನಿ ಅ.ಹಿ.ಪ್ರಾ. ಶಾಲೆ, ಹಳೆವಿದ್ಯಾರ್ಥಿ ಸಂಘದ ಆಡಳಿತ ಮಂಡಳಿಯ ಸಂಯುಕ್ತ ವರ್ಧಂತ್ಯುತ್ಸವ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಕೆ. ಅನಿಲ್ ಕುಮಾರ್‌ರವರ ಸನ್ಮಾನ ಮತ್ತು ವಿದಾಯ ಸಮಾರಂಭವು ಇತ್ತೀಚೆಗೆ ಕಾರ್ಕಳ ತಾಲೂಕು ಪಂಚಾಯತ್ ಅಧ್ಯಕ್ಷ ಶ್ರೀ ಜಯರಾಮ ಸಾಲ್ಯಾನ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಎಲ್ಲಾ ದೃಷ್ಟಿಯಲ್ಲಿ ಉತ್ತಮವೆನಿಸಿದ ಶಾಲೆಯಲ್ಲಿ ಸೇವಾವಧಿಯನ್ನು ಉತ್ತಮ ರೀತಿಯಲ್ಲಿ ಪೂರೈಸಿದ ಕೆ. ಅನಿಲ್‌ಕುಮಾರ್‌ರವರ ಖ್ಯಾತಿಗೆ ಅಭಿಮಾನಿಗಳ ಸಂಖ್ಯೆಯೇ ಸಾಕ್ಷಿಯಾಗಿದೆ ಎಂದರು.

ಮುಖ್ಯ ಅತಿಥಿಗಳಾದ ಕಟೀಲು ದೇವಳದ ಕಾಲೇಜು ಪ್ರಾಂಶುಪಾಲ ಪ್ರೊಫೆಸರ್ ಕೆ. ಬಾಲಕೃಷ್ಣ ಶೆಟ್ಟಿಯುವರು ನಿವೃತ್ತರಿಗೆ ಮಾಡುವ ಸನ್ಮಾನ, ವಿದಾಯಕೂಟ ಮಾಡುವ ಉದ್ದೇಶ ನಿವೃತ್ತರಿಗಲ್ಲ ಅವರ ಶಿಷ್ಯವೃಂದಕ್ಕೆ ಅಭಿಮಾನಿ ಬಂಧುಗಳಿಗೆ ಇಂತಹ ಶಿಕ್ಷಕರೊಬ್ಬರು ಇಲ್ಲಿ ಇದ್ದರು. ಅವರ ಆದರ್ಶಗಳನ್ನು ಮುಂದಿನ ಜನಾಂಗಕ್ಕೆ ತಿಳಿಸುವ ಸಲುವಾಗಿ ಸಮಾರಂಭ, ನಿವೃತ್ತರಿಗೆ ಜನರ ಅಭಿಮಾನವೇ ಸನ್ಮಾನ. ಹೃದಯಸ್ಪರ್ಶಿ ಸಮಾರಂಭವು ಇದಕ್ಕೆ ಉತ್ತರ ನೀಡಿದೆ ಎಂದರು.

ನಿವೃತ್ತ ಮುಖ್ಯಶಿಕ್ಷಕರನ್ನು ಅವರ ಗುರುಗಳಾದ ಶ್ರೀ ಜಯಂತ ರಾವ್ ನಿವೃತ್ತ ಪ್ರಾಂಶುಪಾಲರು ಸನ್ಮಾನಿಸುತ್ತಾ ತನ್ನ ಶಿಷ್ಯ ಗುರುತರ ಕೆಲಸಗಳಿಂದ ಎಲ್ಲರ ಪ್ರೀತಿಗೆ, ಮೆಚ್ಚುಗೆಗೆ ಪಾತ್ರರಾಗುವುದು ನನಗೆ ಸಂತಸ ತಂದಿದೆ. ಅವರ ಮುಂದಿನ ಜೀವನ ಸುಗಮವಾಗಲೆಂದು ಶುಭ ಹಾರೈಸಿದರು. ಸನ್ಮಾನಕ್ಕೆ ಉತ್ತರವಾಗಿ ನಿವೃತ್ತರ ಸೇವಾವಧಿಯಲ್ಲಿ ಸಹಕರಿಸಿದ ಸರ್ವರಿಗೆ ಕೃತಜ್ಞತೆ ಸಲ್ಲಿಸಿದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಮುಖ್ಯಶಿಕ್ಷಕ ವಿಠಲ ಬೇಲಾಡಿ ಅಭಿನಂದಿಸುತ್ತಾ ಸಂಸ್ಥೆಯ ಬಗ್ಗೆ ಅಧ್ಯಾಪಕರ ಸೇವಾ ವೈಖರಿಯ ಬಗ್ಗೆ ಅನೇಕ ವರ್ಷಗಳಿಂದ ಬಲ್ಲವನಾದ ನಾನು ಅಮೃತ ಮಹೋತ್ಸವ ಸಂದರ್ಭದಲ್ಲಿ ಉತ್ತಮ ಯಶಸ್ಸಿಗೆ ದುಡಿದವರಲ್ಲಿ ಇವರೂ ಒಬ್ಬರು. ಆಡಳಿತ ಮಂಡಳಿ ಹಾಗೂ ಎಲ್ಲರ ಸಹಕಾರದಿಂದ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಶ್ರೀಯುತರ ನಿವೃತ್ತ ಜೀವನ ಸುಸಾಂಗವಾಗಿ ಸಾಗಲೆಂದು ಶುಭಕೋರಿದರು. ಶಾಲಾ ಸಂಚಾಲಕ ಯು.ಶೇಷಗಿರಿ ಕಾಮತ್ ಸ್ವಾಗತಿಸಿದರು. ಬಿ.ಲಕ್ಷ್ಮೀನಾರಾಯಣ ರಾವ್ ಸನ್ಮಾನ ಪತ್ರ ವಾಚಿಸಿದರು. ಮುಖ್ಯಶಿಕ್ಷಕ ಯನ್.ಸುಧಾಕರ್ ರಾವ್ ವರದಿ ವಾಚಿಸಿದರು. ಕುಮಾರಿ ಪ್ರೀತಿ ಕಾರ್ಯಕ್ರಮ ನಿರೂಪಿಸಿದರು. ಸಂಧ್ಯಾ ಸ್ವಸ್ತಿವಾಚನಗೈದರು. ಪೃಥ್ವಿರಾಜ್ ಬಲ್ಲಾಳ್ ವಂದಿಸಿದರು. ಸೂರ್ಯಕಾಂತ ಶೆಟ್ಟಿ, ಬಿ.ಯಚ್.ಶಿವರಾಮ ಆಚಾರ್ಯ, ಶಾರದಾ ಉಮೇಶ್, ಸುರೇಶ್ ಕಾಮತ್ ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಕೋರಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀಮತಿ ಲೀಲಾ ನಾರಾಯಣ ಸುವರ್ಣ ಸಂಘದ ವರದಿ ವಾಚಿಸಿದರು. ಕೊನೆಗೆ ಶಾಲಾ ಮಕ್ಕಳಿಂದ ವಿವಿಧ ಕಾರ್ಯಕ್ರಮಗಳ ಬಳಿಕ ಹಳೆ ವಿದ್ಯಾರ್ಥಿ ಮಿತ್ರರಿಂದ ತುಳು ನಾಟಕ ಪ್ರದರ್ಶಿಸಲ್ಪಟ್ಟಿತು.

**- ಎನ್.ಸುಧಾಕರ ರಾವ್**

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ.) : ವಾರ್ಷಿಕ ಮಹಾಸಭೆ

ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ 16ನೇ ವಾರ್ಷಿಕ ಮಹಾಸಭೆಯು ದಿನಾಂಕ 01-01-2012ರಂದು ತಾಲೂಕಿನ ಅಲ್ಬಾಡಿಯಲ್ಲಿರುವ ಮರೂರು ಶ್ರೀ ಶ್ರೀಧರ ಹೆಬ್ಬಾರ್‌ರ ಮನೆಯಲ್ಲಿ ಸಂಭ್ರಮ ಸಡಗರ ದಿಂದ ನಡೆಯಿತು. ತಾಲೂಕಿನ ಸುಮಾರು 200 ಜನ ಸಮಾಜಬಾಂಧವರು ಸಭೆಯಲ್ಲಿ ಭಾಗವಹಿಸಿ ಸುಖ-ದುಃಖ, ಸಿಹಿ-ಕಹಿ, ಸ್ನೇಹ-ಸಂಬಂಧಗಳನ್ನು ಹಂಚಿಕೊಂಡು ಅವಿಭಕ್ತ ಕುಟುಂಬದಂತೆ ಬೆಳಿಗ್ಗೆಯಿಂದ ಸಂಜೆಯ ತನಕ ಒಂದು ದಿನವನ್ನು ಅತ್ಯಂತ ಖುಷಿಯಿಂದ ಕಳೆದರು.

**ಉದ್ಘಾಟನೆ :** ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಸಂಘದ ಮಹಾಸಭೆಯನ್ನು ನಿವೃತ್ತ ಉಪನ್ಯಾಸಕ, ಸಾಹಿತಿ, ಹರಿದಾಸ್ ಮರೂರು ನಾರಾಯಣ ಹೆಬ್ಬಾರ್ ಜ್ಯೋತಿ ಬೆಳಗಿಸುವು ದರ ಮೂಲಕ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ದಯಾನಂದ ರಾವ್ ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉದ್ಘಾಟಕರು ಸಮಾಜಬಾಂಧವರನ್ನು ಆದರದಿಂದ ಸ್ವಾಗತಿಸಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿ, ವಂದಿಸಿದರು.

**ಆಟೋಟ ಸ್ಪರ್ಧೆ :** ಇದೇ ಸಂದರ್ಭದಲ್ಲಿ ಸಮಾಜ ಬಾಂಧವರಿಗಾಗಿ ಗುಂಡೆಸೆತ, ಬಾಳೆ ಹಣ್ಣು ತಿನ್ನುವುದು, ಸೂಜಿಗೆ ದಾರ ಪೋಣಿಸುತ್ತ ಓಡುವುದು, ಉದ್ದಿನಕಾಳಿನ ಲೆಕ್ಕತೆಗೆಯುವುದು ಮತ್ತು ಪುಟಾಣಿ ಮಕ್ಕಳಿಗಾಗಿ ಬಾಲ್ ಎಸೆತ, ನೆಲಗಡಲೆ ಒಡೆಯುವುದು, ಮೇಣದ ಬತ್ತಿ ಹಚ್ಚಿ ನಿಲ್ಲಿಸುವುದು, ಬಲೂನ್ ಊದಿ ಕಟ್ಟುವುದು... ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು. ಶ್ರೀಮತಿ ಶಾಂತಾ ಗಣೇಶ್, ಶ್ರೀಮತಿ ಸುಮ ಅರುಣ ಶ್ಯಾನುಭೋಗ್, ಮಂಜುನಾಥ ಹೆಬ್ಬಾರ್, ಪ್ರಕಾಶ ರಾವ್ ಇನ್ನಿತರರು ಸ್ಪರ್ಧೆಗಳನ್ನು ನಡೆಸಿಕೊಟ್ಟರು. ಎಲ್ಲರೂ ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗವಹಿ ಸಿದರು. ಸ್ಪರ್ಧಾ ವಿಜೇತರಿಗೆ ಶ್ರೀಮತಿ ನಳಿನಿ ರವೀಂದ್ರ ದೊಡ್ಮನೆ ಪ್ರಾಯೋಜಕರಾಗಿದ್ದು ಬಹುಮಾನ ವಿತರಿಸಿದರು.

**ವಾರ್ಷಿಕ ಅಧಿವೇಶನ :** ಸಂಘದ ವಾರ್ಷಿಕ ಅಧಿವೇಶನವು ಅಧ್ಯಕ್ಷ ದಯಾನಂದ ರಾವ್ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಉಪ್ಪಿನಕುದ್ರು ಮಂಜುನಾಥ ಹೆಬ್ಬಾರ್ ಗತ ವರ್ಷದ ವರದಿಯನ್ನು ಮಂಡಿಸಿ ಸಭೆಯಿಂದ ಅನುಮೋದನೆ ಪಡೆದರು. ಕೋಶಾಧಿಕಾರಿ ಪ್ರೊ| ಶಂಕರ ರಾವ್ ಕಾಳಾವರ ಸಂಸ್ಥೆಯ ಆದಾಯ ವ್ಯಯ ಆಸ್ತಿ ತಃಖ್ತೆಯನ್ನು ಸಭೆಗೆ ನೀಡಿ ಒಪ್ಪಿಗೆ ಪಡೆದರು.

**ನೂತನ ಪದಾಧಿಕಾರಿಗಳ ಆಯ್ಕೆ :** ವಾರ್ಷಿಕ ಸಭೆಯಲ್ಲಿ 2012-15ರ ಸಾಲಿಗೆ ನೂತನ ಕಾರ್ಯಕಾರಿ ಮಂಡಳಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಶ್ರೀ ಗಣೇಶ್‌ರಾವ್ ಕುಂಭಾಸಿ ಅಧ್ಯಕ್ಷರಾಗಿ, ಶ್ರೀ ಜಯರಾಮ ಶ್ಯಾನಭಾಗ್ ಕಾರ್ಯದರ್ಶಿ ಯಾಗಿ, ಪ್ರೊ| ಶಂಕರ ರಾವ್ ಕಾಳಾವರ ಎರಡನೇ ಬಾರಿಗೆ ಕೋಶಾಧಿಕಾರಿಯಾಗಿ, ಪ್ರಸಕ್ತ ಅಧ್ಯಕ್ಷರಾದ ಶ್ರೀ ದಯಾನಂದ ರಾವ್ ಗೌರವಾಧ್ಯಕ್ಷರಾಗಿ, ಶ್ರೀಮತಿ ಪಾರ್ವತಿ ಬೈಂದೂರು ಮಹಿಳಾ ವೇದಿಕೆಯ ಅಧ್ಯಕ್ಷೆಯಾಗಿ, ಉಪನ್ಯಾಸಕ ಸಂಪತ್‌ಕುಮಾರ ಕುಂಭಾಸಿ ಯುವವೇದಿಕೆಯ ಅಧ್ಯಕ್ಷರಾಗಿ ಆಯ್ಕೆಯಾದರು.

ಇದೇ ಸಂದರ್ಭದಲ್ಲಿ ತಾಲೂಕಿನಲ್ಲಿ ಕಳೆದ ವರ್ಷ ನಮ್ಮನ್ನು ಅಗಲಿದ ಸಮಾಜ ಬಾಂಧವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಲಹೆ ಸೂಚನೆಗಳನ್ನು ಆಹ್ವಾನಿಸಿ, ಚರ್ಚಿಸಿ ವಿವರಣೆ ನೀಡಲಾಯಿತು.

**ಪ್ರಧಾನ ಸಮಾರಂಭ :** ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ದಯಾನಂದ ರಾವ್ ವಹಿಸಿದ್ದರು. ವಿಶೇಷ ಅತಿಥಿಯಾಗಿ ಶ್ರೀ ಸೀತಾರಾಮ ಹೆಬ್ಬಾರ್, ಸಂಪನ್ಮೂಲ ವ್ಯಕ್ತಿ, ಅಬ್ದುಲ್ ನಝೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಕೇಂದ್ರ ಮೈಸೂರು ಆಗಮಿಸಿದ್ದರು. ಶ್ರೀಯುತರು ಮಾತನಾಡುತ್ತ ಸಂಘದ ಕಾರ್ಯಚಟುವಟಿಕೆಗಳು ಇತರ ಸಂಘಗಳಿಗೆ ಮಾದರಿಯಾಗಿವೆ. ಸಂಘವು ಇನ್ನಷ್ಟು ಬೆಳೆದು ಸಮಾಜ ಬಾಂಧವರ ಬೇಡಿಕೆ ಗಳಿಗೆ ಸ್ಪಂದಿಸಲಿ ಎಂದು ಹಾರೈಸಿದರು. ಇನ್ನೋರ್ವ ಮುಖ್ಯ



ಶ್ರೀ ಗಣೇಶ್‌ರಾವ್ ಕುಂಭಾಸಿ ಅಧ್ಯಕ್ಷರು

ಅತಿಥಿ ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಅಧ್ಯಕ್ಷ ಕೆ. ಶ್ರೀನಿವಾಸ ಹೆಬ್ಬಾರ್ ಮಾತನಾಡುತ್ತ ಬ್ರಾಹ್ಮಣರು ತಮ್ಮ ತಮ್ಮೊಳಗಿನ ಪ್ರಭೇದಗಳನ್ನೆಲ್ಲ ಮರೆತು ಒಟ್ಟಾಗಿ ವಿಪ್ರ ಸಮಾಜದ ಏಳಿಗೆಗಾಗಿ ದುಡಿಯಬೇಕು. ಪ್ರಭೇದಗಳಿಗೆ ಭಾಷೆ, ಜೀವನಕ್ರಮ, ವೃತ್ತಿ ಸಂಪರ್ಕದ ಕೊರತೆಗಳೇ ವಿನಾಃ ನಾವೆಲ್ಲರೂ ಬ್ರಾಹ್ಮಣರು ಒಂದೇ ಎಂದು ತಿಳಿದು ಒಗ್ಗಟ್ಟಾಗಿ ನಮ್ಮ ಸಮಾಜ ಸಂಘರ್ಷಕ್ಕೆ ಎಡೆಯಿಲ್ಲದೆ ಸಾಮರಸ್ಯದಿಂದ ಬದುಕುವಂತಾಗಬೇಕು ಎಂದು ನುಡಿದರು.

**ಪ್ರತಿಭಾ ಪುರಸ್ಕಾರ :** ತಾಲೂಕಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ, ಪದವಿಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳನ್ನು ನಗದು ನೀಡಿ ಪುರಸ್ಕರಿಸಲಾಯಿತು. ಸಂಘದ ಗೌರವಾಧ್ಯಕ್ಷ ಶ್ರೀ ಉಮೇಶ ಶ್ಯಾನಭೋಗ್ ಕಿರಿಮಂಜೇಶ್ವರ ಪ್ರತಿಭಾ ಪುರಸ್ಕಾರದ ಮೊತ್ತ ರೂ.3,500/- ನೀಡಿ ಪ್ರಾಯೋಜಿಸಿದರು. ಈ ಕಾರ್ಯಕ್ರಮ ವನ್ನು ಕಿರಿಮಂಜೇಶ್ವರ ಶ್ರೀ ಅರುಣ ಶ್ಯಾನಭೋಗ್ ನಡೆಸಿಕೊಟ್ಟು ಮುಂದಿನ ವರ್ಷ ತಮ್ಮ ಕಿರಿಮಂಜೇಶ್ವರದ ಮನೆಯಲ್ಲಿ ಸಂಘದ 17ನೇ ವಾರ್ಷಿಕ ಮಹಾಸಭೆಗೆ ಮುಂಗಡ ಆಹ್ವಾನ ನೀಡಿದರು. ಸಮಾಜದ 10 ವಿದ್ಯಾರ್ಥಿಗಳಿಗೆ ಸುಮಾರು ರೂ.6,000/- ವನ್ನು ವಿದ್ಯಾರ್ಥಿ ವೇತನವಾಗಿ ನೀಡಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ರಮೇಶ ಧಾರೇಶ್ವರ ಪಡುವರಿ, ಬೈಂದೂರು ನಡೆಸಿ ಕೊಟ್ಟು ಮಕ್ಕಳಿಗೆ ಶುಭ ಕೋರಿದರು.

**ಸನ್ಮಾನ :** ತಾಲೂಕಿನಲ್ಲಿಯೇ ಹಿರಿಯ ಮಹನೀಯರು ಅಧಿವೇಶನದ ಪ್ರಾಯೋಜಕ ರಲ್ಲಿ ಒಬ್ಬರಾದ ಮರೂರಿನ ಶ್ರೀ ಶಂಕರ ನಾರಾಯಣ ಹೆಬ್ಬಾರ್ ಮತ್ತು ಶ್ರೀಮತಿ ಮೂಕಾಂಬಿಕಾ ಅಮ್ಮ ಬೈಂದೂರು ಇವರನ್ನು ಶಾಲು, ಸ್ಮರಣಿಕೆ, ಫಲ ಪುಷ್ಪಗಳನ್ನು ನೀಡಿ ದೀರ್ಘಾಯುಷ್ಯ, ನೆಮ್ಮದಿ ಜೀವನವನ್ನು ಹಾರೈಸಿ ಸನ್ಮಾನಿಸಲಾಯಿತು. ಶ್ರೀ ಶೇಷಪ್ಪಯ್ಯ ಹೆಬ್ಬಾರ್ ಬೈಂದೂರು ಶ್ರೀ ಗೋಪಾಲಕೃಷ್ಣ ಹೆಬ್ಬಾರ್ ಅಬ್ಲಿಕಟ್ಟೆ ಹಿರಿಯರ ಪರಿಚಯವನ್ನು ಸಭೆಗೆ ನೀಡಿದರು.

ಪ್ರಾಯೋಜಕರಾದ ಶ್ರೀಮತಿ ವೇದಾವತಿ ಮತ್ತು ಶ್ರೀ ಮ.ನಾ.ಹೆಬ್ಬಾರ್, ಶ್ರೀಮತಿ ಉಷಾ ಮತ್ತು ಶ್ರೀ ಶ್ರೀಧರ ಹೆಬ್ಬಾರ್ ಮತ್ತು ಶ್ರೀಮತಿ ಶ್ರೀಲತಾ ಮತ್ತು ಶ್ರೀ ಸತ್ಯ ನಾರಾಯಣ ಹೆಬ್ಬಾರ್‌ರನ್ನು ಫಲ-ಪುಷ್ಪ, ಶಾಲು, ಸ್ಮರಣಿಕೆಗಳನ್ನಿತ್ತು ಗೌರವಿಸ ಲಾಯಿತು.

ಕುಮಾರಿಯರಾದ ಶ್ರೀಲಕ್ಷ್ಮೀ, ಶೀತಲ್, ಶಾಂತಲಾ, ನಿಖಿತಾ ಹಾಗೂ ವಾಣಿ ಪ್ರಾರ್ಥಿಸಿದರು. ಅತಿಥೇಯರಾದ ಶ್ರೀಮತಿ ಉಷಾ ಶ್ರೀಧರ ಹೆಬ್ಬಾರ್ ಸ್ವಾಗತಿಸಿದರು. ಮರೂರು ಸತ್ಯನಾರಾಯಣ ಹೆಬ್ಬಾರ್ ವಂದಿಸಿ, ಬಾಕ್ರೂರು ಪ್ರಕಾಶ ರಾವ್ ಕಾರ್ಯಕ್ರಮ ನಿರ್ವಹಿಸಿದರು.

ತಾಲೂಕಿನ ಸಮಾಜಬಾಂಧವರು ಮರೂರು ಹೆಬ್ಬಾರ್ ಸಹೋದರರ ಆತಿಥ್ಯ, ಅಧಿವೇಶನದ ವ್ಯವಸ್ಥೆ, ಊಟೋಪಚಾರವನ್ನು ಮನಸಾರೆ ಸವಿದು ಅವರನ್ನು ಮುಕ್ತಕಂಠದಿಂದ ಅಭಿನಂದಿಸಿ, ಒಂದು ದಿನದ ಸಂಘದ ಹಬ್ಬದಂತಹ ವಾತಾವರಣದಲ್ಲಿ ಸಂಭ್ರಮಿಸಿ ಸಮಾರಂಭವನ್ನು ಮೆಲುಕು ಹಾಕುತ್ತಾ ತಮ್ಮ ತಮ್ಮ ಊರಿಗೆ ಪಯಣಿಸಿದರು.

**-ಪ್ರೊ| ಶಂಕರ ರಾವ್ ಕಾಳಾವರ**
ವಿಶ್ರಾಂತ ಪ್ರಾಧ್ಯಾಪಕರು

# ಕೆ. ಹರಿಶ್ಚಂದ್ರನ್ ಅವರಿಗೆ ಮೃದಂಗ ಚಕ್ರವರ್ತಿ ಪ್ರಶಸ್ತಿ ಪ್ರದಾನ




ಕರಾವಳಿ ಕರ್ನಾಟಕದಿಂದ ಹೊರಟು ಅಖಿಲ ಭಾರತ ವ್ಯಾಪ್ತಿಯಲ್ಲಿ ಹೆಸರುಗಳಿಸಿದ ಕರ್ನಾಟಕ ಸಂಗೀತ ಕಲಾವಿದರಲ್ಲಿ ನಮ್ಮ ಸಮಾಜದ ಕೆ. ಹರಿಶ್ಚಂದ್ರನ್ ಅವರದು ಮಹತ್ವದ ಹೆಸರು. ಉಡುಪಿ ಬಳಿಯ ಕುಂಜಾರಿನಲ್ಲಿ ವೆಂಕಪ್ಪಯ್ಯ-ಸೀತಮ್ಮ ದಂಪತಿ ಗಳ ಪುತ್ರನಾಗಿ 30-1-1932ರಂದು ಜನಿಸಿದ ಹರಿಶ್ಚಂದ್ರನ್ ತಮ್ಮ ಹಿರಿಯರಿಂದಲೇ ಸಂಗೀತ-ಲಯವಾದ್ಯಗಳನ್ನು ಕಲಿಯಲು ಆರಂಭಿಸಿದರು. ಮುಂದೆ ನಾಟಕ ಕಂಪನಿಯನ್ನು ಸೇರಿಕೊಂಡು ಒಟ್ಟಿಗೆ ಮೃದಂಗ ಅಭ್ಯಾಸವನ್ನು ಮುಂದುವರೆಸಿದರು. ಅಯ್ಯಮಣಿ ಅಯ್ಯರ್, ಪುಟ್ಟಾಚಾರರ ಶಿಷ್ಯವೃತ್ತಿಯ ಬಳಿಕ ಮದರಾಸಿಗೆ ಹೋಗಿ ಎಸ್.ವಿ.ಎಸ್.ನಾರಾಯಣರಲ್ಲಿ ಗುರುಕುಲ ಪದ್ಧತಿಯಿಂದ ಶಿಷ್ಯವೃತ್ತಿ ನಡೆಸಿ ಸತತ ಸಾಧನೆಯಿಂದ ಜ್ಞಾನಾರ್ಜನೆಗೈದರು.

ಮುಂದೆ ಮೈಸೂರಿನ ಆಸ್ಥಾನದಲ್ಲಿ ಹದಿನೈದು ವರ್ಷಕಾಲ ಆಸ್ಥಾನ ವಿದ್ವಾನ್ ಆಗಿ ಸೇವೆ ಸಲ್ಲಿಸಿ 1972ರಲ್ಲಿ ಮಂಗಳೂರು ಆಕಾಶವಾಣಿಯನ್ನು ಸೇರಿಕೊಂಡರು. 1982 ರಲ್ಲಿ 'ಎ' ದರ್ಜೆಯ ಕಲಾವಿದರಾಗಿ ಭಡ್ತಿ ಹೊಂದಿದ ಅವರು 1992ರಲ್ಲಿ ನಿವೃತ್ತರಾದರು.

ಕರ್ನಾಟಕ ಸಂಗೀತದ ಸಮಕಾಲೀನ ದಿಗ್ಗಜರಿಗೆಲ್ಲಾ ಸಾಥಿ ನುಡಿಸಿದ ಇವರು ಮೃದಂಗ ಶಿಕ್ಷಣದ ಪಠ್ಯ ಸಮಿತಿಯಲ್ಲಿ, ವಿದ್ವತ್ ಪರೀಕ್ಷೆಗಳ ಮಟ್ಟ ಪರೀಕ್ಷಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಹಲವಾರು ಸಂಘ ಸಂಸ್ಥೆಗಳು ಗುರುತಿಸಿವೆ. ಕರ್ನಾಟಕ ಕಲಾಶ್ರೀ, ಗಾಯನ ಸಮಾಜದ ಪ್ರಶಸ್ತಿ, ಗಾನಕಲಾ ಪರಿಷತ್, ದರ್ಬಾರ್ ಹಾಲ್ ಪ್ರಶಸ್ತಿಗಳು ಇವರಿಗೆ ದೊರಕಿವೆ. ಈ ವರ್ಷದ 27ನೆಯ ಆಲಂಪಾಡಿ ವೆಂಕಟೇಶ ಶಾನುಭಾಗ ಸ್ಮಾರಕ ಪ್ರಶಸ್ತಿ ಇವರಿಗೆ ದೊರಕಿದ್ದು ಕಳೆದ ಡಿಸೆಂಬರ್ 25ರಂದು ಕಾಸರಗೋಡಿನಲ್ಲಿ ಮೃದಂಗ ಚಕ್ರವರ್ತಿ ಎಂಬ ಬಿರುದನಿತ್ತು ಗೌರವಿಸಲಾಯಿತು. ಇಂತಹ ಸಜ್ಜನ ಸಾಧಕನಿಗೆ ನಮ್ಮ ಸಮಾಜದ ಹಿರಿಯ ಸಂಗೀತಗಾರರ ಹೆಸರಿನಲ್ಲಿ ನೀಡುವ ಈ ಪ್ರಶಸ್ತಿ ಸಂದುದು ಔಚಿತ್ಯಪೂರ್ಣವಾಗಿದೆ.

**-ಸುಕುಮಾರ ಆಲಂಪಾಡಿ**

# ಶಿವಬ್ರಾಹ್ಮಣ ಸಭಾ ಬಪ್ಪನಾಡು ಮುಲ್ಕಿ : ಮಕ್ಕಳ ದಿನಾಚರಣೆ

ಸಭಾದ 2011ನೇ ಸಾಲಿನ ಮಕ್ಕಳ ದಿನಾಚರಣೆ ಕಾರ್ಯಕ್ರಮ ಮುಲ್ಕಿಯ ಡಾ| ರಾಘವ ರಾಯರ ಮನೆ 'ನಾರಾಯಣ ವೈದ್ಯಾಶ್ರಮ' ದಲ್ಲಿ ಬಹಳ ಸಂಭ್ರಮದಿಂದ ಜರುಗಿತು.

ಮುಖ್ಯ ಅತಿಥಿಯಾಗಿ ಬಂದವರು ನಮ್ಮ ಊರಿನವರೇ ಆದ, ಪ್ರಸಕ್ತ ಉಡುಪಿಯಲ್ಲಿ ವಾಸವಾಗಿರುವ ಬಪ್ಪನಾಡು ಕೃಷ್ಣಮೂರ್ತಿ ಯವರು. ಇವರು ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತಿ ಹೊಂದಿ ಪ್ರಸಕ್ತ ಶಾರದಾ ಕಲ್ಯಾಣ ಮಂಟಪದಲ್ಲಿ ಕಾರ್ಯದರ್ಶಿಯಾಗಿ ದುಡಿಯು ತ್ತಿದ್ದಾರೆ. ಇವರನ್ನು ಸಂಘದ ಅಧ್ಯಕ್ಷರಾದ ರತ್ನಾಕರ ರಾಯರು ಪ್ರೀತಿಯ ದ್ಯೋತಕವಾಗಿ ಗುಲಾಬಿ ಹೂ ನೀಡಿ ಸ್ವಾಗತಿಸಿದರು.

ಶ್ರೀಯುತ ರತ್ನಾಕರರಾಯರ ಅಧ್ಯಕ್ಷತೆ ಯಲ್ಲಿ ನಡೆದ ಈ ಸಮಾರಂಭದಲ್ಲಿ ಡಾ| ರಾಘವ ರಾಯರು ಎಲ್ಲರನ್ನೂ ಸ್ವಾಗತಿಸಿ ದರು. ನಂತರ ಕು| ಶಮಶ್ರೀಯಿಂದ ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾದ ಕಾರ್ಯ ಕ್ರಮಕ್ಕೆ ಬಾಲಕ ಪೃಥ್ವಿಕ್ ಸುಶ್ರಾವ್ಯ ವಾಗಿ ಹಾಡಿದ ಪುರಂದರ ದಾಸ ಕೀರ್ತನೆ ಮೆರುಗುಕೊಟ್ಟಿತು. ನಂತರ ಪೃಥ್ವಿಕ್ ತನ್ನ ಹುಟ್ಟಿದ ಹಬ್ಬದ ಪ್ರಯುಕ್ತ ಎಲ್ಲರಿಗೂ ಚಾಕಲೇಟು ಹಂಚಿದನು. ಹುಟ್ಟಿದ ಹಬ್ಬ ಆಚರಿಸುವ ಎಲ್ಲ ಮಕ್ಕಳೂ ಮುಖ್ಯ ಅತಿಥಿಗಳ ಆಶೀರ್ವಾದ ಪಡೆದು ಗುಲಾಬಿ ಹೂವನ್ನು ಸ್ವೀಕರಿಸಿದರು.

ನಂತರ ಸಂಘದ ಉಪಕಾರ್ಯದರ್ಶಿ ಶ್ರೀಯುತ ಕೃಷ್ಣರಾಜ್‌ರವರು ಮಕ್ಕಳ ದಿನಾಚರಣೆಯ ಉದ್ದೇಶವನ್ನು ವಿವರಿಸಿದರು. ಕೊರಂಗ್ರಪಾಡಿ ಶಶೀಂದ್ರ ರಾವ್‌ರವರು ತನ್ನ ಮಾತಾಪಿತರ ನೆನಪಿಗೋಸ್ಕರ ಸಂಘದಲ್ಲಿ ಇರಿಸಿದ ನಿರಖು ಠೇವಣಿ 1 ಲಕ್ಷ ದೇಣಿಗೆಯ ಬಡ್ಡಿಯನ್ನು ಸಂಘದ ಎಲ್ಲಾ ಸದಸ್ಯರ ಮಕ್ಕಳಿಗೆ ಶಿಷ್ಯವೇತನವಾಗಿ ವಿತರಿಸುವ ಬಗ್ಗೆ ಮತ್ತು ಶ್ರೀರಾಮಚಂದ್ರಾಪುರ ಮಠದ ಗೋಶಾಲೆಗೆ ವರ್ಷಂಪ್ರತಿ ಸಂಘದ ಮೂಲಕ ದೇಣಿಗೆ ಕಳುಹಿಸುವ ಬಗ್ಗೆ ತಿಳಿಸಿದರು. ಅಲ್ಲದೆ ತನ್ನ ಬಾಲ್ಯದ ಶಾಲಾದಿನಗಳನ್ನು ಬಪ್ಪನಾಡಿನಲ್ಲಿ ಕಳೆದ ಮಂಗಳೂರಿನ ಶ್ರೀಯುತ ಬಿ.ಯಂ. ಸಂಜೀವರಾಯರು ನೀಡಿದ ರೂ.20,000 ದೇಣಿಗೆಯಿಂದ ಬರುವ ಬಡ್ಡಿಯನ್ನೂ ಮಕ್ಕಳಿಗೆ ಶಿಷ್ಯವೇತನವಾಗಿ ನೀಡುವ ವಿಚಾರ ತಿಳಿಸಿದರು.

ನಂತರ ಆಟೋಟದಲ್ಲಿ ವಿಜೇತರಾದವರಿಗೆ ಬಹುಮಾನ, ಶಿಷ್ಯವೇತನವನ್ನು ಮುಖ್ಯ ಅತಿಥಿ ಗಳಿಂದ ವಿತರಿಸಲಾಯ್ತು. ನೆರೆದ ಹಿರಿಯರಿಗೆ ಕೃಷ್ಣರಾಜ್‌ರವರು ಧಾರ್ಮಿಕ ರಸಪ್ರಶ್ನೆ ನಡೆಸಿಕೊಟ್ಟು, ಅವರಿಗೂ ಬಹುಮಾನಗಳನ್ನು ವಿತರಿಸಿ, ಧಾರ್ಮಿಕ ವಿಚಾರದ ಕಡೆಗೆ ಗಮನ ಹರಿಸುವಂತೆ ಮಾಡಿದರು.

ನಂತರ ಮುಖ್ಯ ಅತಿಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಕೃಷ್ಣರಾಜ್‌ರವರು ಕೃಷ್ಣಮೂರ್ತಿರಾಯರು ಕಷ್ಟದ ದಿನಗಳಲ್ಲೂ ಹಂತಹಂತವಾಗಿ ಮುಂದೆಬಂದು, ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿಯಾಗಿ ನಿವೃತ್ತಿ ಹೊಂದಿದ ವಿಚಾರ ಸಂಕ್ಷಿಪ್ತವಾಗಿ ಪರಿಚಯಿಸಿ, ಅವರ ಬಾಲ್ಯದ ಜೀವನ, ಬಪ್ಪನಾಡಿನಲ್ಲಿ ಕಳೆದದ್ದನ್ನು ಸಭೆಗೆ ತಿಳಿಯಪಡಿಸಿದರು. ನಂತರ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾದ ಶ್ರೀಯುತ ಭಗವಾನ್ ಶರ್ಮರ ಹಸ್ತದಿಂದ ಸನ್ಮಾನ ನಡೆಯಿತು. ಸನ್ಮಾನಿತರು, ಸಂಘದ ಚಟುವಟಿಕೆಗೆ ಮೆಚ್ಚುಗೆ ಸೂಚಿಸಿ, ಊರ ಎಲ್ಲಾ ಜಾತಿ ಬಾಂಧವರು ಒಟ್ಟುಸೇರಿ ಆಚರಿಸುವ ಈ ಕಾರ್ಯಕ್ರಮಕ್ಕೆ ಶುಭಕೋರಿ, ಮುಂದಕ್ಕೆ ಇಲ್ಲಿಯ ಮಕ್ಕಳು ಶಾರದಾ ಕಲ್ಯಾಣ ಮಂಟಪಕ್ಕೂ ಬಂದು ಅಲ್ಲಿಯ ಕಾರ್ಯಕ್ರಮ ಗಳಲ್ಲೂ ಭಾಗವಹಿಸಲಿ ಎಂದು ಆಹ್ವಾನ ವಿತ್ತರು.

ಅತಿಥಿಗಳ ಸನ್ಮಾನದ ಖರ್ಚನ್ನು ಡಾ| ಬಿ. ಯಚ್.ಶ್ರೀಪತಿ ರಾಯರು ವಹಿಸಿದ್ದರು. ನೆರೆದ ಎಲ್ಲರಿಗೂ ಉಪಹಾರದ ವ್ಯವಸ್ಥೆ ನಡೆಸಿದ್ದು, ಸಿಹಿ ತಿಂಡಿಗಳನ್ನು ಶ್ರೀಯುತ ಮುರಳೀಧರ ರಾವ್, ಕೃಷ್ಣ ರಾಜ್ ಬಿ. ರಾವ್, ಶ್ರೀಮತಿ ಮಾಲತಿ ಎಸ್.ರಾವ್ ಹಂಚಿದರು. ಆಟೋಟ ದಲ್ಲಿ ವಿಜೇತರಾದವರಿಗೆ ಪ್ರತೀ ವರ್ಷದಂತೆ ಈ ಬಾರಿಯೂ ಡಾ| ರಾಘವ ರಾಯರು ತನ್ನ ಹಿರಿಯರ ನೆನಪಿಗೋಸ್ಕರ ಬಹುಮಾನವಿತ್ತು ಸ್ವಯಂ ಸ್ಫೂರ್ತಿಯಿಂದ ಕಾರ್ಯಕ್ರಮದ ವೆಚ್ಚವನ್ನು ಭರಿಸಿ ಸಹಕರಿಸಿದರು. ಕಾರ್ಯಕ್ರಮವು ಶ್ರೀಯುತ ರಾಘವರಾಯರ ವಂದನಾರ್ಪಣೆಯೊಂದಿಗೆ ಮುಕ್ತಾಯ ವಾಯಿತು.

**-ಡಾ| ರಾಘವರಾವ್, ಮುಲ್ಕಿ**

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

1. ತಮಿಳು ಸ್ಮಾರ್ತ ಬ್ರಾಹ್ಮಣರು (72.2 ಸೆ.ಮಿ.) 2. ದೇಶಸ್ಥ ಸ್ಮಾರ್ತ ಬ್ರಾಹ್ಮಣರು (77.0 ಸೆ.ಮಿ.) 3. ಮಾಧ್ವ ಬ್ರಾಹ್ಮಣರು (78.0 ಸೆ.ಮಿ.) 4. ಕರ್ನಾಟಕ ಸ್ಮಾರ್ತ ಬ್ರಾಹ್ಮಣರು (78.4 ಸೆ.ಮಿ.) 5. ಮಹಾರಾಷ್ಟ್ರ ದೇಶಸ್ಥ ಬ್ರಾಹ್ಮಣರು (76.9 ಸೆ.ಮಿ.) 6. ಕೊಂಕಣಸ್ಥ ಬ್ರಾಹ್ಮಣರು (77.3 ಸೆ.ಮಿ.) 7. ತುಳು ಶಿವಳ್ಳಿ ಬ್ರಾಹ್ಮಣರು ತುಳುನಾಡಿನಲ್ಲಿ (80.4 ಸೆ.ಮಿ.) 8. ಮೊಗೇರರು (78.2 ಸೆ.ಮಿ.) 9. ಬಂಟರು (ನಾಡವರು) (78.0 ಸೆ.ಮಿ.) 10. ಬಿಲ್ಲವರು (77.0 ಸೆ.ಮಿ.) 11. ತುಳು ಬ್ರಾಹ್ಮಣರು (84.4 ಸೆ.ಮಿ.)

ಮೇಲಿನ Index ನಲ್ಲಿ ಬೇರೆ ಜಿಲ್ಲೆಗಳ ಬ್ರಾಹ್ಮಣ ಪಂಗಡಗಳ Index 80.0 ಸೆ.ಮೀ.ಗಿಂತ ಕಡಿಮೆ ಇರುವಾಗ ತುಳು ಶಿವಳ್ಳಿಯವರ Index 80 ಸೆ.ಮೀ.ನ್ನೂ ಮೀರಿರುವುದು ಕಂಡುಬರುತ್ತದೆ. ಇದು ಗಮನಿಸತಕ್ಕ ವಿಷಯ. ಅಂತೆಯೇ ನಮ್ಮ ತುಳುನಾಡಿನ ಇತರ ಪಂಗಡದವರ Index ನ್ನು ತುಳು ಬ್ರಾಹ್ಮಣರ Index ನೊಡನೆ ಹೋಲಿಸಿದರೆ, ತುಳು ಬ್ರಾಹ್ಮಣರ Index, ಇತರರ Index ಗಿಂತ ಮೀರುವುದನ್ನು ಕಾಣಬಹುದು. ಥರ್ಸ್ಟನರು ತುಳು ಬ್ರಾಹ್ಮಣರ Index ಹೆಚ್ಚಾಗುವುದಕ್ಕೆ ಅನುರಕ್ತ ಸಂಬಂಧವೇ ಕಾರಣವೆಂದು ವಿವರಿಸಿದ್ದಾರೆ.

ಈ ನಿರ್ಧಾರವನ್ನೇ ಪುಷ್ಟೀಕರಿಸುತ್ತದೋ ಎಂಬಂತೆ ದಕ್ಷಿಣ ಕನ್ನಡದ ಮನ್ಯುವೆಲ್ಲಿನಲ್ಲಿ ತುಳುವದ ಬ್ರಾಹ್ಮಣರೇತರರಲ್ಲಿ (ಬಂಟರಲ್ಲಿ) ಹೆಂಗಸರ ಮೂಲಕ ಬರುವ 20 ಬಲಿಗಳನ್ನು ಈ ಕೆಳಗಿನಂತೆ ಕೊಟ್ಟಿದೆ. ಮಾತ್ರವಲ್ಲದೆ, ಈ ಬಲಿಗಳು ಬ್ರಾಹ್ಮಣ ಕುಲಗಳಿಗೆ ಸರಿಹೋಲುತ್ತವೆ ಎಂದೂ ಅದರಲ್ಲಿ ಉಲ್ಲೇಖವಿದೆ.

1) ಬಾಗೆತ್ತಿನಾಯ 2) ಬಂಗರಣ್ಣಾಯ 3) ಬರ್ಮರನ್ನಾಯ 4) ಬೊಣ್ಯಣ್ಣಾಯ (ಬುನ್ನನ್ನಾಯ) 5) ಹಿರಿಬಣ್ಣಾಯ (ಸಿರಿಬನ್ನಾಯ) 6) ಕರಂಬರಣ್ಣಾಯ 7) ಕರ್ಬುರಂಣ್ಣಾಯ 8) ಕೆಲ್ಲರ ಬಣ್ಣಾಯ 9) ಕೋಜರನ್ನಾಯ 10) ಕುಂಡೋಣಿ ಬಣ್ಣಾಯ 11) ಕುಂಡಲಣ್ಣಾಯ 12) ನೆಲಬಣ್ಣಾಯ (ಉಜ್ಜೆಟ್ಟಬನ್ನಾಯ) 13) ಪಾಂಗಳಣ್ಣಾಯ 14) ಪೆರ್ಗಡಣ್ಣಾಯ 15) ಪುಲ್ಯಟನ್ನಾಯ 16) ಸಾಲಬನ್ನಾಯ (ಐಯ್ಯಬನ್ನಾಯ) 17) ಸಾಲಣ್ಣಾಯ 18) ತಲಾರ ಬಣ್ಣಾಯ 19) ಉಳಿಬಣ್ಣಾಯ 20) ಉಪ್ಪಂಣಾಯ

ಈ ವಿಷಯವೂ ಮೇಲೆ ಹೇಳಿದ ಥರ್ಸ್ಟನರವರ ಅಭಿಪ್ರಾಯಕ್ಕೆ-ಎಂದರೆ ಬ್ರಾಹ್ಮಣ ಶೂದ್ರ ರಕ್ತ ಸಂಬಂಧಕ್ಕೆ ಆಧಾರವಾಯಿತೆಂದು ಕೆಲವರ ಅಭಿಪ್ರಾಯ.

ಹೀಗಾಗಿ ಗ್ರಾಮಪದ್ಧತಿಗಳು ತೋರಿಸುವಂತೆ ಈ ಬ್ರಾಹ್ಮಣರಲ್ಲಿ ಹಲವು ಕುಲಗಳು ಉಂಟಾಗಲಿಕ್ಕೆ ಕಾರಣವಾಯಿತೆಂದೂ ಮಾತ್ರವಲ್ಲದೆ ಆ ಕುಲದವರೆಲ್ಲರೂ ಸರಿ ಸಮಾನತ್ವವನ್ನು ಹೊಂದಲಿಲ್ಲವೆಂದೂ ಟೀಕಿಸಲ್ಪಟ್ಟಿದೆ. ಉದಾ: ಶಿವಳ್ಳಿ ಗ್ರಾಮದಲ್ಲಿ ಪ್ರಥಮ, ಮಧ್ಯಮ, ಅಧಮವೆಂಬ ಪರಿಗಣನೆಯಿಂದ 120 ಗೃಹ ಯಾ ವಂಶ ವಿಭಾಗಗಳಿಗೆ. ಇವುಗಳಲ್ಲಿ 105 ಕುಲಗಳು ತ್ರಿಕರ್ಮಿಗಳು; ತಂತುಮಾತ್ರ ಬ್ರಾಹ್ಮಣರು, ಈಗ ಭೋಜನ, ಪ್ರತಿ ಭೋಜನದ ಬಗ್ಗೆ ಈ ಮೂರು ಪಂಗಡದವರೊಳಗೆ ಭೇದವಿಲ್ಲವೆಂಬುದಾಗಿ ತಿಳಿದು ಬಂದರೂ, ಹಿಂದಿನ ಕಾಲದಲ್ಲಿ ಬಹಳ ಭೇದಗಳಿದ್ದಿರಬೇಕು ಎಂಬುದನ್ನು ತೋರಿಸುವಂತಹ ಕುರುಹುಗಳು ಈಗಲೂ ಕಂಡು ಬರುವುದೆಂಬುದನ್ನು ಈ ಮೂರು ಪಂಗಡದವರಲ್ಲಿ ವೃದ್ಧರನು ಬೇರೆ ಬೇರೆ ವಿಚಾರಿಸಿದಲ್ಲಿ ತಿಳಿದು ಬರುತ್ತದೆ.

ನಿಷ್ಪಕ್ಷಪಾತವಾಗಿ ವಿಮರ್ಶೆಯನ್ನು ಮುಂದುವರಿಸುವುದಾದರೆ ಅನುಮಾನಿತ ಸತ್ಯವನ್ನಾಧರಿಸಿಕೊಂಡು ಕೆಲವು ತೀರ್ಮಾನಗಳನ್ನು ಮಾಡಬಹುದು 1) ಅಹಿಕ್ಷೇತ್ರದಿಂದ ಬಂದ ಬ್ರಾಹ್ಮಣರು ತಮ್ಮ ಕುಟುಂಬ ಸಮೇತ ಬಂದಿರುವರೊ ಅಥವಾ ಗಂಡಸರು ಮಾತ್ರ ಬಂದುದೋ ಎಂಬುದನ್ನು ಖಂಡಿತವಾಗಿ ಅನುಮಾನವಿಲ್ಲದೆ ನಿಶ್ಚಯಿಸಲು ಯಾವ ಆಧಾರಗಳೂ ಇಲ್ಲ. 2) ತುಳುನಾಡಿಗೆ ನಾನು ಈ ಮೊದಲು ನಿರ್ಧರಿಸಿದಂತೆ ಮೂರನೆಯ ವಲಸೆಯಲ್ಲಿ ಬಂದ ಬ್ರಾಹ್ಮಣರು ಶೂದ್ರ ಸ್ತ್ರೀಯನ್ನು ವಿವಾಹವಾಗಲಿಲ್ಲವೆಂಬುದನ್ನು ಸಿದ್ಧಪಡಿಸುವುದು ಕಷ್ಟವಾಗಿದೆ. 3) ದಕ್ಷಿಣ ಭಾರತದ ಹೆಚ್ಚಿನ ಕಡೆಗಳಲ್ಲೂ ಮತಾಂತರವಾಗಿದೆ ಎಂಬುದನ್ನು ಚರಿತ್ರೆಯು ತಿಳಿಸುತ್ತದೆ. 4) ಅದೇ ತೆರನಾಗಿ ನಮ್ಮ ನಾಡಿನಲ್ಲೂ ಬ್ರಾಹ್ಮಣ್ಯಕ್ಕೆ ಮತಾಂತರವಾಗಿದ್ದಿರಬೇಕೆಂದು ಊಹಿಸಬಹುದು. ಕಾರಣ ದಕ್ಷಿಣ ಹಿಂದೂ ದೇಶದ ಇತರ ಕಡೆಗಳಲ್ಲಿ ಬ್ರಾಹ್ಮಣ ಸಂಖ್ಯೆ ಒಟ್ಟು ಜನಸಂಖ್ಯೆಯ 2 ಅಥವಾ 3 ಶೇಕಡಾ ಆಗಿದ್ದರೆ, ನಮ್ಮ ತುಳುನಾಡಿನಲ್ಲಿ ಇದು 10ರಿಂದ 12 ಶೇಕಡಾ ಇದೆ ಎಂಬುದು ಆಶ್ಚರ್ಯವನ್ನು ಉಂಟು ಮಾಡುವುದಾಗಿದೆ. 5) E-Thurston ರವರು ಮಾಡಿದ ಪ್ರಯೋಗವು ಭೌತವಿಜ್ಞಾನದ ಪ್ರಯೋಗದಂತೆ ಸತ್ಯವೆಂದು ನಂಬುವುದೂ ಕಷ್ಟಸಾಧ್ಯವಾಗಿದೆ. ಕಾರಣ ಅವರ ಪ್ರಯೋಗವನ್ನು ಮತ್ತೂ ಮುಂದುವರಿಸಿ, ಅನೇಕಾನೇಕ ದೃಷ್ಟಾಂತಗಳಿಂದ ದೃಢೀಕರಿಸುವುದು ಅಗತ್ಯವಿದೆ. ಆದರೂ ಅವರ ತೀರ್ಮಾನವನ್ನು ಕಿತ್ತೊಗೆಯಲು ಅಸಾಧ್ಯ 6) ತುಳುನಾಡಿನಲ್ಲಿ ಈ ಬ್ರಾಹ್ಮಣರು ಬ್ರಾಹ್ಮಣೇತರರ ಕನ್ಯೆಯರನ್ನು ವಿವಾಹವಾಗಿ ತಮ್ಮ ಕುಲಗಳನ್ನು ವೃದ್ಧಿಸಿದರೂ ಅದರ ಅಶಾಸ್ತ್ರೀಯವಾಗಲಾರದು. ಗೌತಮ ಧರ್ಮ ಶಾಸ್ತ್ರ ಪ್ರಕಾರ ಈ ರೀತಿ ಅನುಲೋಮ ವಿವಾಹವಾದ ನಂತರ, ಏಳು ತಲೆಮಾರಿನಲ್ಲಿ ಅವಿಚ್ಛಿನ್ನವಾಗಿ ನಿರ್ದಿಷ್ಟಕರ್ಮವನ್ನು ಶಾಸ್ತ್ರೀಯವಾಗಿ ಅವಲಂಬಿಸಿದರೆ ಬ್ರಾಹ್ಮಣತ್ವ ಬರುವುದೆಂಬುವುದು ಶಾಸ್ತ್ರ ಸಮ್ಮತ. ಆದುದರಿಂದ, ಬ್ರಾಹ್ಮಣರ ಸಂಖ್ಯೆ ತುಳುನಾಡಿನಲ್ಲಿ ಈ ಕ್ರಮದಲ್ಲಿ ವೃದ್ಧಿಯಾಗಿದ್ದರೂ ಬ್ರಾಹ್ಮಣ್ಯಕ್ಕೆ ಅದು ಯಾವ ರೀತಿಯ ಅವಮಾನವೆಂದೂ ತಿಳಿಯಬಾರದು.

(ಮುಂದುವರಿಯುವುದು)

**'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕ ಇಲ್ಲಿ ಲಭ್ಯ :**
**ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), #10-2-87B1, ಮೊದಲನೆಯ ಮಹಡಿ, ಎಸ್.ಎಮ್.ಎಸ್.ಪಿ. ಸಂಕೀರ್ಣ, ಸಂಸ್ಕೃತ ಕಾಲೇಜ್ ಬಳಿ, ಉಡುಪಿ-576101, ಕರ್ನಾಟಕ**

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ದೇಶದ ಲಕ್ಷಾಂತರ ಜನರು ಈ ಎಲ್ಲ ಶೈಕ್ಷಣಿಕ ಚಟುವಟಿಕೆಗಳಿಂದ ಸಂಸ್ಕಾರ ಸಂಪನ್ನರಾಗುತ್ತಿದ್ದಾರೆ.

**ಸಾಮಾಜಿಕ ಕ್ಷೇತ್ರ :**

ಶ್ರೀ ಆದಿಶಂಕರಭಗವತ್ಪಾದರು ತಮ್ಮ ಕಾಲದಲ್ಲಿ ಆರಂಭಿಸಿದ ಸಾಮಾಜಿಕ ಚಟುವಟಿಕೆಗಳು ಇಂದು ಶೃಂಗೇರಿ ಶ್ರೀ ಶಾರದಾ ಪೀಠದಲ್ಲಿ ಹೊಸ ಆಯಾಮ ಪಡೆದು ಜನಸಾಮಾನ್ಯರೂ ಅವುಗಳ ಪ್ರಯೋಜನ ಪಡೆಯುವಂತಾಗಿದೆ. ಆಚಾರ್ಯ ಶಂಕರರಿಗೆ ಜನರ ಆರೋಗ್ಯ ಕುರಿತು ವಿಶೇಷ ಕಾಳಜಿ. ಕುಷ್ಠರೋಗಿಯೊಬ್ಬನಿಗೆ ಅವರೇ ಸ್ವತಹ ಶುಶ್ರೂಷೆಗೈದ ಪ್ರಸಂಗವೊಂದು ಅವರ ಜೀವನ ಚರಿತ್ರೆಯಲ್ಲಿ ಬರುತ್ತದೆ. ಆದರೆ ಶ್ರೀಮಠವು ದೇಶದ ನಾನಾಭಾಗಗಳಲ್ಲಿ ಸುಮಾರು ಹದಿನೈದಕ್ಕೂ ಹೆಚ್ಚು ಅತ್ಯುತ್ತಮ ವೈದ್ಯಕೀಯ ಸಂಸ್ಥೆಗಳನ್ನು ಆರಂಭಿಸಿ, ತನ್ಮೂಲಕ ಪ್ರತಿವರ್ಷ ಲಕ್ಷೋಪಲಕ್ಷ ಮಂದಿಯ ಬದುಕಿಗೆ ಊರುಗೋಲಾಗಿದೆ.

ಶ್ರೀ ಶಾರದಾಪೀಠದ ಹಿಂದಿನ ಅಧಿಪತಿಗಳಾಗಿದ್ದ ಜಗದ್ಗುರು ಶ್ರೀ ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು 1979ರಲ್ಲಿ ಆರಂಭಿಸಿದ ಶೃಂಗೇರಿಯ 'ಶಾರದಾ ಧನ್ವಂತರಿ ಆಸ್ಪತ್ರೆ' ಇಂದು ತನ್ನ ಚಟುವಟಿಕೆಗಳನ್ನು ಸಾಕಷ್ಟು ವಿಸ್ತರಿಸಿಕೊಂಡು ಮಲೆನಾಡು ಭಾಗದ ಜನತೆಗೆ ಒಂದು ವರದಾನವಾಗಿ ಪರಿಣಮಿಸಿದೆ. ವಿವಿಧ ರೋಗಗಳನ್ನು ಗುಣಪಡಿಸುವ ನುರಿತ ವೈದ್ಯರ ತಂಡ ಇಲ್ಲಿದೆ. ಜತೆಗೆ ಚೆನ್ನೈ, ಮಣಿಪಾಲ-ಮೊದಲಾದ ಕಡೆಗಳಿಂದ ತಜ್ಞವೈದ್ಯರು ಆಗಾಗ ಇಲ್ಲಿಗೆ ಭೇಟಿ ನೀಡಿ, ತಮ್ಮ ಸೇವೆಯನ್ನು ಧಾರೆಯೆರೆಯುತ್ತಿದ್ದಾರೆ. ಇಲ್ಲಿನ ಸುಸಜ್ಜಿತವಾದ ವಾರ್ಡ್‌ನಲ್ಲಿ ನೂರು ಹಾಸಿಗೆಗಳಿಗೂ ಹೆಚ್ಚಿನ ಸೌಕರ್ಯವಿದೆ. ಈ ಆಸ್ಪತ್ರೆಯು ಹೊರರೋಗಿಗಳ ವಿಭಾಗ, ಆಪರೇಷನ್ ಥಿಯೇಟರ್‌ಗಳು, ಬ್ಲಡ್‌ಬ್ಯಾಂಕ್, ಐಸಿಯು, ತಪಾಸಣಾ ಪ್ರಯೋಗ ಶಾಲೆ ಇತ್ಯಾದಿಗಳನ್ನು ಹೊಂದಿದೆ. ಪ್ರತ್ಯೇಕವಾದ ಆಯುರ್ವೇದ ಮತ್ತು ಹೋಮಿಯೋಪಥಿ ವಿಭಾಗಗಳೂ ಇಲ್ಲಿವೆ. ಕ್ಯಾನ್ಸರ್ ರೋಗವನ್ನು ಪತ್ತೆಹಚ್ಚಲು 'ಪೊಟೋಗ್ರಾಮ ಐಸೊಲೋಪ್ ಸ್ಕ್ಯಾನರ್' ಎಂಬ ತಾಂತ್ರಿಕತೆಯ ಸೌಕರ್ಯವಿದೆ. ಕೆಲವು ವರ್ಷಗಳ ಹಿಂದೆ ಆರಂಭಗೊಂಡ 'ರೂರಲ್ ಸೆಟಲೈಟ್ ಕೇಂದ್ರ'ವು ತುಂಬ ಉಪಯುಕ್ತವಾಗಿದೆ. ಈ ಎಲ್ಲ ವಿಶಿಷ್ಟ ಸೌಕರ್ಯಗಳಿಂದ ಸಜ್ಜುಗೊಂಡಿರುವ ಈ ಆಸ್ಪತ್ರೆ ಈಗಾಗಲೆ ಅಂತಾರಾಷ್ಟ್ರೀಯ ಮಾನ್ಯತೆಗೆ ಪಾತ್ರವಾಗಿದೆ. ಈ ಆಸ್ಪತ್ರೆಯು ನೀಡುತ್ತಿರುವ ಉತ್ತಮ ಸೇವೆಯನ್ನು ಗಮನಿಸಿದ ಅಮೆರಿಕಾದ 'ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್' ಎಂಬ ಸಂಸ್ಥೆಯು ಎರಡು ಮೊಬೈಲ್ ಮೆಡಿಕಲ್ ಸೌಲಭ್ಯವೂ ಸೇರಿದಂತೆ, ಒಂದು ಕೋಟಿ ರೂಪಾಯಿಗಳ ಅನುದಾನ ನೀಡಿದೆ. ಪ್ರಾಯಶಃ ಭಾರತದ ಇತರ ಯಾವ ಖಾಸಗೀ ಆಸ್ಪತ್ರೆಗೂ ಇಷ್ಟು ದೊಡ್ಡ ಮೊತ್ತದ ಅನುದಾನ ಲಭ್ಯವಾಗಿಲ್ಲ.



PNNM Ayurveda Medical College
Shoranur (Kerala)


ಈ ಆಸ್ಪತ್ರೆಗೆ ಸಂಬಂಧಿಸಿದ 'ಶಾರದಾ ನರ್ಸಿಂಗ್ ಇನ್‌ಸ್ಟಿಟ್ಯೂಟ್' ಒಂದು ಉತ್ತಮ ಶಿಕ್ಷಣ ಸಂಸ್ಥೆಯಾಗಿ ಅನೇಕ ಮಂದಿ ಶುಶ್ರೂಷಕಿಯರನ್ನು ತರಬೇತುಗೊಳಿಸುತ್ತಿದೆ. ಅವರ ಸೇವೆಯು ಕೇವಲ ಈ ಆಸ್ಪತ್ರೆಗೆ ಮಾತ್ರ ಸೀಮಿತವಾಗದೆ, ಸುತ್ತಮುತ್ತಲಿನ ಇತರ ಆಸ್ಪತ್ರೆಗಳಿಗೂ ಲಭ್ಯವಾಗುತ್ತಿದೆ. ಶೃಂಗೇರಿಯಲ್ಲಿ ತರಬೇತು ಪಡೆದ ದಾದಿಯರಿಗೆ ವಿದೇಶಗಳಲ್ಲೂ ಉದ್ಯೋಗಾವಕಾಶಗಳು ದೊರೆಯುತ್ತಿವೆ. ಆಂಧ್ರ ಪ್ರದೇಶದ ಗುಂಟೂರಿನಲ್ಲಿ ಸುಶ್ರುತ ಮೊಬೈಲ್ ಆಸ್ಪತ್ರೆಯನ್ನು ಸ್ಥಾಪಿಸಲಾಗಿದ್ದು, ಅಲ್ಲಿನ ಮೊಬೈಲ್ ವಾಹನವು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಂಚರಿಸಿ ಸಾವಿರಾರು ಮಂದಿಗೆ ಅವರ ಮನೆಯಲ್ಲೇ ಚಿಕಿತ್ಸೆ ಒದಗಿಸುತ್ತಿದೆ. ತಮಿಳುನಾಡಿನ ಸೇಲಂನಲ್ಲಿ 'ಶಾರದಾ ಧನ್ವಂತರಿ ಚಾರಿಟೇಬಲ್ ಡಿಸ್ಪೆನ್ಸರಿ' ಎಂಬ ವೈದ್ಯಕೀಯ ಸಂಸ್ಥೆಯನ್ನು ಆರಂಭಿಸಲಾಗಿದೆ. ಹೈದ್ರಾಬಾದ್‌ನಲ್ಲಿ 'ಸಂಚಾರೀ ಆರೋಗ್ಯ ತಪಾಸಣಾ ವಾಹನ'ದ ಸೌಕರ್ಯವಿದೆ. ಇವೆಲ್ಲವೂ ಆಯಾ ಪರಿಸರದ ಜನತೆಗೆ ಉತ್ತಮ ಸೇವೆಯನ್ನು ನೀಡುತಿವೆ.


ಬೆಂಗಳೂರಿನ ಶೃಂಗೇರಿ ಶಂಕರಮಠದ ಶತಮಾನೋತ್ಸವ ಸಂದರ್ಭದಲ್ಲಿ ಶ್ರೀಮಠದ ಸಮೀಪದಲ್ಲೇ ಆರಂಭಿಸಲಾದ, ಶ್ರೀರಂಗ ದೊರೆ ಆಸ್ಪತ್ರೆ ಈಗಾಗಲೇ ಅತ್ಯುತ್ತಮ ಆಸ್ಪತ್ರೆ ಎಂಬ ಖ್ಯಾತಿಗೆ ಪಾತ್ರವಾಗಿದೆ. ಸುಮಾರು ನೂರಿಪ್ಪತ್ತಕ್ಕೂ ಹೆಚ್ಚು ಹಾಸಿಗೆಗಳು, ಹತ್ತಕ್ಕೂ ಹೆಚ್ಚು ಡಯಾಲಿಸಿಸ್ ಉಪಕರಣಗಳು, ಅಲಾಸ್ಕ್ಯಾನಿಂಗ್, ಇ.ಸಿ.ಜಿ. ಡಯಾಗ್ನಸ್ಟಿಕ್ ಉಪಕರಣಗಳು ಹೀಗೆ ಅನೇಕ ಆಧುನಿಕ ಸೌಲಭ್ಯಗಳು ಈ ಆಸ್ಪತ್ರೆಯಲ್ಲಿವೆ. ಅನೇಕ ವಿಭಾಗಗಳಲ್ಲಿ ತಜ್ಞರಾದ ವೈದ್ಯರ ತಂಡ ಈ ಆಸ್ಪತ್ರೆಯ ಜತೆಗಿದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇದಲ್ಲದೆ ಶಾರದಾ ಕಣ್ಣಿನ ಆಸ್ಪತ್ರೆ, ಶ್ರೀಶಾರದಾ ಧನ್ವಂತರಿ ಆಸ್ಪತ್ರೆ, ಶಾರದಾ ರೋಟರಿ ಹೃದ್ರೋಗ ತಪಾಸಣಾ ಕೇಂದ್ರ-ಇವೆಲ್ಲ ಬೆಂಗಳೂರಿನಲ್ಲಿರುವ ಆರೋಗ್ಯಕ್ಕೆ ಸಂಬಂಧಿಸಿದ ಮತ್ತೆ ಕೆಲವು ಚಿಕಿತ್ಸಾ ಕೇಂದ್ರಗಳು. ಇದೀಗ ಇಲ್ಲಿ, ಶಂಕರ ಕ್ಯಾನ್ಸರ್ ರಿಸರ್ಚ್ ಹಾಸ್ಪಿಟಲ್ ಮತ್ತು ಶಂಕರ ಟಿಸ್ಯೂ ಎಂಜಿನಿಯರಿಂಗ್ ರಿಸರ್ಚ್‌ಸೆಂಟರ್ ಎಂಬ ಎರಡು ಸಂಸ್ಥೆಗಳ ಸ್ಥಾಪನೆಗೆ ಎಲ್ಲ ವಿಧದ ಪ್ರಯತ್ನಗಳು ನಡೆಯುತ್ತಿವೆ. 'ಇನ್‌ಫರ್ಮೇಶನ್ ಆ್ಯಂಡ್ ರಿಸೋರ್ಸ್ ಸೆಂಟರ್ ಫಾರ್ ಪ್ಯೂಪಲ್ ಅಫೆಕ್ಟೆಡ್ ಬೈ ಆಸ್ಟಿಮ್' ಎಂಬ ಸಂಸ್ಥೆಯು ಶ್ಲಾಘನೀಯವಾದ ಕಾರ್ಯವನ್ನು ನಿರ್ವಹಿಸುತ್ತಿದೆ.

ಕೇರಳದ ಶೋರನೂರ್ ಎಂಬಲ್ಲಿ 2006ರಲ್ಲಿ ಸ್ಥಾಪಿಸಲಾದ 'ಪಿ.ಎನ್.ಎನ್.ಎಂ. ಆಯುರ್ವೇದ ಮೆಡಿಕಲ್ ಕಾಲೇಜು' ಈ ದೇಶದ ಅತ್ಯುತ್ತಮ ಆಯುರ್ವೇದ ಕಾಲೇಜುಗಳಲ್ಲಿ ಒಂದೆಂದು ಪ್ರಶಂಸೆಗೆ ಪಾತ್ರವಾಗಿದೆ. ಆಯುರ್ವೇದಕ್ಕೆ ಸಂಬಂಧಿಸಿದ ವಿಷಯಗಳನ್ನಲ್ಲದೆ ಭಾರತದ ಪ್ರಾಚೀನ ವಿಜ್ಞಾನಗಳೆಂದು ಪ್ರಸಿದ್ಧ ಪಡೆದ ವಾಸ್ತು ಮತ್ತು ಜ್ಯೋತಿಷ ಶಾಸ್ತ್ರವನ್ನೂ ಇಲ್ಲಿ ಬೋಧಿಸಲಾಗುತ್ತದೆ.

(ಮುಂದುವರಿಯುವುದು)

Krishna Rao
Ph :2520652
Mob. :9902029048
KISHAN
Studio & Video


Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.



RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

# ಕೇಸರಿ ಅಮ್ಮ



ಈ ಜಗತ್ತು ತುಂಬ ವಿಸ್ಮಯಕಾರಿಯಾದುದಾಗಿದೆ. ಇಲ್ಲಿ ವಾಸವಿರುವ ಎಲ್ಲಾ ವರ್ಗದ ಜನರು ಅನೇಕ ಜಾತಿ ಮತಗಳನ್ನು ಹೊಂದಿದವರು. ಅವರಾಡುವ ಭಾಷೆ, ಬಟ್ಟೆಬರೆ, ಆಹಾರಕ್ರಮ ಎಲ್ಲವೂ ಬೇರೆ ಬೇರೆಯಾದುದು. ನಮ್ಮ ಭಾರತ ದೇಶದಲ್ಲಿ ಅನೇಕ ರೀತಿಯ ಆಹಾರ ಕ್ರಮವಿದೆ. ಅದರಲ್ಲಿ ನಮ್ಮ ಅವಿಭಜಿತ ದ.ಕ.ಜಿಲ್ಲೆಯಲ್ಲಿ ಉದ್ದಿನಿಂದ ತಯಾರಿಸಲಾದ ಕೊಟ್ಟೆಕಡುಬೆಂದರೆ ಎಲ್ಲರಿಗೂ ಅತ್ಯಂತ ಪ್ರಿಯವಾದುದು. ಇದನ್ನು ಅಕ್ಕಿ ಮತ್ತು ಉದ್ದಿನಿಂದ ತಯಾರಿಸುತ್ತಾರೆ.

ಈ ಕಡುಬನ್ನು ಎರಡು ವಿಧಾನದಲ್ಲಿ ತಯಾರಿಸುತ್ತಾರೆ. ಒಂದು, ಹಲಸಿನ ನಾಲ್ಕು ಎಲೆಗಳನ್ನು ತೆಂಗಿನ ಗರಿಯ ಕಡ್ಡಿಗಳನ್ನು ಹಾಕುವ ಮೂಲಕ ಹಾಗೂ ಇನ್ನೊಂದು ಮುಂಡ್ಕನ ಓಲಿಯಿಂದ ತಯಾರಿಸುತ್ತಾರೆ. (ಮುಂಡ್ಕ-ಇದು ಕೇದಗೆ ಹೂವಿನ ಜಾತಿಗೆ ಸೇರಿದ ಒಂದು ಮುಳ್ಳಿನ ಗಿಡ). ಇದನ್ನು ತುಳುವಿನಲ್ಲಿ ಮೂಡೆ ಎಂದು ಕರೆಯುತ್ತಾರೆ.

ಈ ಮೂಡೆಯು ಪ್ರಥಮ ಪೂಜೆಗೊಳ್ಳುವ ಗಣಪತಿಗೆ ಬಲುಪ್ರಿಯ. ಚೌತಿ ಹಬ್ಬಕ್ಕೆ ಇದನ್ನು ಎಲ್ಲರೂ ಮಾಡುತ್ತಾರೆ. ಈ ಮುಂಡ್ಕನ ಓಲಿಯ ಮೂಡೆಯನ್ನು ತಯಾರಿಸುವುದರಲ್ಲಿ ಬಹಳ ಹೆಸರು ಗಳಿಸಿದವರು ನಮ್ಮ ಸಮಾಜದ ಓರ್ವ ಮಹಿಳೆಯವರು, ಪ್ರಸ್ತುತ 87 ವರ್ಷ ಪ್ರಾಯದಲ್ಲಿ ನಮ್ಮೊಂದಿಗಿರುವ ಬ್ರಹ್ಮಾವರದ ಕೇಸರಿ ಅಮ್ಮ. ಇವರು ಸುಮಾರು 40 ವರ್ಷಗಳಿಂದ ಮುಂಡ್ಕನ ಓಲಿಯ ಕೊಟ್ಟೆಯನ್ನು ಮಾಡಿಕೊಂಡು ಬಂದಿರುತ್ತಾರೆ. ಬ್ರಹ್ಮಾವರ ಪರಿಸರದಲ್ಲಿ ಇವರ ಹೆಸರು ಚಿರಪರಿಚಿತ. 1924ನೇ ಇಸವಿಯಲ್ಲಿ ಬ್ರಹ್ಮಾವರದ ಕೃಷ್ಣರಾಯ ಮತ್ತು ಕಾವೇರಿಯಮ್ಮ ಅವರ 7 ಜನ ಮಕ್ಕಳಲ್ಲಿ ಇವರೂ ಒಬ್ಬರು. ಬಾಲ್ಯದ ವಿದ್ಯಾಭ್ಯಾಸ ಬ್ರಹ್ಮಾವರದಲ್ಲಿ ನಡೆಯಿತು. ಕೇವಲ 2ನೇ ತರಗತಿವರೆಗೆ ಮಾತ್ರ ಇವರ ವಿದ್ಯಾಭ್ಯಾಸ ನಡೆಯಿತು. ಮುಂದೆ ಕಟಪಾಡಿ ಮಟ್ಟುವಿನ ಶ್ರೀಯುತ ನರಸಿಂಹ ರಾಯರೊಂದಿಗೆ ಇವರ ವಿವಾಹವಾಯಿತು. ನರಸಿಂಹರಾಯರು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಹೋಟೆಲನ್ನು ಮಾಡಿಕೊಂಡಿದ್ದರು. ಈ ದಂಪತಿಗಳಿಗೆ ಓರ್ವ ಮಗಳ ಆಗಮನವೂ ಆಯಿತು. ಮಗಳಿಗೆ 6ರ ಪ್ರಾಯದಲ್ಲಿ ಕೇಸರಿಯಮ್ಮನವರ ಪತಿಯವರು ನಿಧನರಾದರು. ಪತಿಯ ನಿಧನಾನಂತರ ಸಂಸಾರ ನಡೆಸುವ ಸಂಪೂರ್ಣ ಜವಾಬ್ದಾರಿ ಇವರ ಮೇಲೆ ಬಿತು.

ಆದರೂ ಇವರು ಧೃತಿಗೆಡದೆ ಬ್ರಹ್ಮಾವರ ಪರಿಸರದಲ್ಲಿಯೇ ನೆಲೆನಿಂತು ಮಹಾಲಿಂಗೇಶ್ವರ ದೇವರ ಸೇವೆಯನ್ನು ಮಾಡಿದರು. ಆ ಮೂಲಕ ಬಂದ ಆದಾಯದಿಂದ ಹೊಸದಾಗಿ ಈ ಮುಂಡ್ಕನ ಓಲಿಯಿಂದ ಕೊಟ್ಟೆಯನ್ನು ತಯಾರು ಮಾಡಲು ಆರಂಭಿಸಿ ತಮ್ಮ ಜೀವನ ನಿರ್ವಹಣೆ ಮಾಡಿದರು. ಇವರು ಹಬ್ಬದ ಸಮಯದಲ್ಲಿ ಸಾವಿರ ಸಂಖ್ಯೆಯಲ್ಲಿ ಕೊಟ್ಟೆಯನ್ನು ತಯಾರಿಸಿ ಮಾರುತ್ತಿದ್ದರು. ಆದರೆ ಈಗ ವಯಸ್ಸು ಆಗಿರುವುದರಿಂದ ಮುಂಡ್ಕನ ಓಲಿಯನ್ನು ತರುವುದು ಮತ್ತು ಮುಳ್ಳು ತೆಗೆಯುವುದು ಕಷ್ಟಕರವಾಗಿರುವುದೆ ರಿಂದ ಈ ಕೆಲಸವನ್ನು ನಿಲ್ಲಿಸಿದ್ದಾರೆ. ಚೌತಿ ಹಬ್ಬದ ಸಮಯದಲ್ಲಿ ಕೊಟ್ಟೆ ಕೇಳಲು ಇವರ ಮನೆಯ ಮುಂದೆ ಕ್ಯೂ ಇರುತ್ತಿತು.

ಇವರ ವಿಶೇಷ ಸಾಧನೆಯನ್ನು ಗುರುತಿಸಿ ಬ್ರಹ್ಮಾವರ ಮಹಾಲಿಂಗೇಶ್ವರ ದೇವಾಲಯದಲ್ಲಿ ಇವರನ್ನು ಸನ್ಮಾನಿಸಿದ್ದಾರೆ. ಇದೊಂದು ಅವರಿಗೆ ಜೀವನದಲ್ಲಿ ಮರೆಯಲಾರದ ಸಂಗತಿಯಾಗಿದೆ. ಬದುಕಿನಲ್ಲಿ ಸಾಧಿಸಬೇಕೆಂಬ ಛಲ ಇದ್ದರೆ ಯಾವ ಕಾರ್ಯವನ್ನೂ ಮಾಡಬಹುದು ಎಂಬುದಕ್ಕೆ ಕೇಸರಿ ಅಮ್ಮನವರೇ ಸಾಕ್ಷಿ. ಕೇಸರಿಯಮ್ಮನವರು ಈ ಕೊಟ್ಟೆ ಮಾಡುವ ಕಲೆಯನ್ನು ಅನೇಕರಿಗೆ ಕಲಿಸಿದ್ದಾರೆ. ಇವರು ಇನ್ನೂ ನೂರು ಕಾಲ ಬಾಳಿ ಬದುಕಲಿ ಮತ್ತು ಇವರಿಗೆ ಶ್ರೀಶಾರದೆಯು ಆಯುರಾರೋಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ.

**-ಎಂ.ಗಣೇಶ್ ರಾವ್**

# 'ನಮ್ಮ ಮನೆ' ಹಾಗೂ 'ಮಾನವ ಜನ್ಮ ದೊಡ್ಡದು' ಪುಸ್ತಕ ಬಿಡುಗಡೆ



ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.) ಕುಕ್ಕಿಕಟ್ಟೆ ಉಡುಪಿ ಇವರು ಪ್ರಕಟಿಸಿದ ಹಾಗೂ ಶ್ರೀ ವೈ.ಭುವನೇಂದ್ರ ರಾವ್ ಇವರು ವಿನೂತನವಾಗಿ ಸಂಪಾದಿಸಿದ ಶ್ರೀ ಎಲ್ಲೂರು ಜೋಯಿಸರ ಎಲ್ಲಾ ಕುಟುಂಬಸ್ಥರ ಎಲ್ಲಾ ವಿವರ (ಫೋಟೊ ಸಹಿತ) ಗಳನ್ನು ನೀಡುವ 'ನಮ್ಮ ಮನೆ' ಎಂಬ ಪುಸಕ ಹಾಗೂ ಶ್ರೀ ವೈ.ಶಾಂತಿನಾಥ ರಾವ್ ವಿರಚಿತ ಆಧ್ಯಾತ್ಮಿಕ ಪುಸಕ 'ಮಾನವ ಜನ್ಮ ದೊಡ್ಡದು' ಇವುಗಳೆರಡರ ಬಿಡುಗಡೆ ಸಮಾರಂಭವು ತಾ.28-1-2012ರಂದು ಉಡುಪಿ ಕುಂಜಿಬೆಟ್ಟಿನಲ್ಲಿರುವ ಶ್ರೀಶಾರದಾ ಮಂಟಪದಲ್ಲಿ ಶ್ರೀ ಎಲ್ಲೂರು ಜೋಯಿಸರ ಎಲ್ಲಾ ಕುಟುಂಬಸ್ಥರ ಶ್ರೇಯೋಭಿವೃದ್ಧಿಗಾಗಿ ನಡೆಸಿದ ಚಂಡಿಕಾ ಹೋಮದ ಪೂರ್ಣಾಹುತಿಯ ನಂತರ ನೆರವೇರಿತು. ಕುಮಾರಿ ಮಾನಸಾ ರಾವ್‌ಳ ಪ್ರಾರ್ಥನೆಯೊಂದಿಗೆ ಆರಂಭವಾದ ಸಮಾರಂಭಕ್ಕೆ ನಮ್ಮ ಸಮಾಜದ ಗಣ್ಯರಾದ ನಿವೃತ್ತ ಉಪನ್ಯಾಸಕ ಸಾಂತೂರು ಸದಾಶಿವ ರಾಯರು ಮತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿ ಇದರ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಅತಿಥಿಗಳಾಗಿ ಆಗಮಿಸಿ ಪುಸಕಗಳನ್ನು ಲೋಕಾರ್ಪಣೆ ಮಾಡಿ ಶುಭಾಸಂಶನಗೈದರು. ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯದರ್ಶಿಗಳಾದ, ಪ್ರಸುತ ಮೈಸೂರಿನಲ್ಲಿರುವ ಶ್ರೀ ಎಲ್ಲೂರು ಉಮೇಶ ರಾಯರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದರು. ಶ್ರೀ ವೈ. ಭುವನೇಂದ್ರ ರಾವ್ ಮತು ಶ್ರೀ ವೈ.ಶಾಂತಿನಾಥ ರಾವ್‌ರವರು ವೇದಿಕೆಯಲ್ಲಿ ಉಪಸಿತರಿದು ಪುಸಕಗಳ ಬಗೆ ವಿವರ ನೀಡಿದರು. ಟ್ರಸ್ಟ್‌ನ ಸಂಚಾಲಕರಾದ ಡಾ| ವೈ. ಸುದರ್ಶನ್ ರಾವ್‌ರವರು ಈ ಎರಡು ಪುಸಕಗಳನ್ನು ಪ್ರಕಟಿಸಿದ ಉದ್ದೇಶವನ್ನು ವಿವರಿಸಿ ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು ಹಾಗೂ ಕೊನೆಯಲ್ಲಿ ಡಾ| ವೈ. ಲಕ್ಷ್ಮೀಶ ರಾವ್ ಧನ್ಯವಾದ ಸಮರ್ಪಿಸಿದರು. ಡಾ|ವೈ.ರವೀಂದ್ರನಾಥ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

**-ಡಾ| ವೈ. ಸುದರ್ಶನ್ ರಾವ್**

# 'ನಮ್ಮ ಮನೆ'-ಒಂದು ಅವಲೋಕನ....



Pandith Y. Laxminarayana Rao, Jyothishka 25-5-1903 - 16-10-1976





Smt. Girijamma Alias Kaveriyamma 2-7-1913 - 11-9-1995

ಎಲ್ಲೂರು, ಎರ್ಮಾಳು ಮತು ಸುತಮುತ ಎಲ್ಲೂರು ಜೋಯಿಸರೆಂದೇ ಪ್ರಖ್ಯಾತರಾದ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರು ಮತ್ತು ಶ್ರೀಮತಿ ಗಿರಿಜಮ್ಮ ಇವರ ಕುಟುಂಬದ ಎಲ್ಲಾ ಸದಸ್ಯರ ವಿಳಾಸ, ಪರಿಚಯ ಮತ್ತು ಸಾಧನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುವ ಒಂದು ವಿಶಿಷ್ಟ ಕೃತಿ- ''ನಮ್ಮ ಮನೆ''. ಇಷ್ಟು ವಿಸ್ತಾರವಾಗಿ ಅದೂ ಆಂಗ್ಲ ಭಾಷೆಯಲ್ಲಿ ಪ್ರಕಟವಾದ ಈ ಪುಸ್ತಕ ನಮ್ಮ ಸಮಾಜದ ಪ್ರಪ್ರಥಮ ಪ್ರಕಟಣೆ ಎನ್ನಬಹುದು. ಇವರ ಕುಟುಂಬದ ಸದಸ್ಯರ ಮದುವೆ, ಉಪನಯನ, ಗೃಹಪ್ರವೇಶ ಮೊದಲಾದ ಸಮಾರಂಭಗಳ ಆಮಂತ್ರಣವನ್ನು ಸುಲಭವಾಗಿ ಕಳುಹಿಸಲು ಇಲ್ಲಿ ನೀಡಿರುವ ವಿಳಾಸ ಪಟ್ಟಿ ಸಹಾಯಕವಾಗಿದೆ. ನಮ್ಮ ಎಲ್ಲಾ ಸಮಾಜ ಬಾಂಧವರಿಗೂ ಈ ವಿಳಾಸದ ವಿವರ ಪ್ರಯೋಜನವಾಗುತ್ತದೆ. ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಇತರ ಪ್ರಕಟಣೆಗಳು ''ಗ್ರಾಮ ವೈದ್ಯ'', ''ಅನಿಕೇತನ'', ''ನಾಯಿಕಚ್ಚಿತೆ'' ಮತ್ತು ''ಮಾನವ ಜನ್ಮ ದೊಡ್ಡದು''.

''ನಮ್ಮ ಮನೆ'' ಎಂಬ ಈ ಪುಸ್ತಕದ ಮುಖಪುಟದ ಆಕರ್ಷಕ ಚಿತ್ರ ಅವಿಭಕ್ತ ಕುಟುಂಬದ ಪ್ರತೀಕದಂತೆ ಕಾಣುತ್ತದೆ. ಎಲ್ಲೂರು ಮಹತೋಭಾರ ಶ್ರೀ ವಿಶ್ವೇಶ್ವರ ದೇವರ ಚಿತ್ರ, ಟ್ರಸ್ಟಿಗಳ ಭಾವಚಿತ್ರಗಳು ಮತ್ತು ಕುಟುಂಬದ ಸದಸ್ಯರುಗಳ ಫೋಟೋ ಆಲ್ಬಂ ಅಂದವಾಗಿ ಮೂಡಿಬಂದಿದೆ. ಸಂಪಾದಕರಾದ ಶ್ರೀ ವೈ. ಭುವನೇಂದ್ರ ರಾವ್ ನಿಜವಾಗಿಯೂ ಅಭಿನಂದನಾರ್ಹರು. ಶುಭಾಶಯಗಳು.

ಟ್ರಸ್ಟಿನ ಸಂಚಾಲಕರು ಡಾ| ವೈ. ಸುದರ್ಶನ ರಾವ್ ಈ ಕೃತಿಯಲ್ಲಿ ತಿಳಿಸುತ್ತಾರೆ : "Publishing books is one special objective of our trust. This is especially to encourage our upcoming writers. We have already published three books “Gramavaidya”, “Anikethana” and “Naayi Kachithe”. Those who have good articles can contact us for publication of their work and make use of our platform.

Publishing this book, which contains every detail of each individual of our family, was our dream since very long time. I hope this book helps us to know each other better. This purpose can be met more impressively by creating a website of our own. I request one of our software engineers to take up this task and make it a history"

ಸಂಪಾದಕರಾದ ವೈ. ಭುವನೇಂದ್ರ ರಾವ್ ಇವರು ಕೃತಿಯಲ್ಲಿ ತಿಳಿಸಿದಂತೆ : "Today the revolution in mass media communication has brought about tremendous changes.One can get any information within no time. Our near and dear ones are just a phone call away from us. On the contrary, though we have landed on other planets, our neighbours, family members are unknown to us. In simple, family bondage is becoming weaker day by day. Many a times we face difficulties in recollecting the names of forefathers and grand children of our own family."

**-ವೈ. ಮೋಹನರಾವ್**

# ಪಾವಂಜೆ : ಚಂಪಾ ಷಷ್ಠಿ ಮಹೋತ್ಸವ ಮತ್ತು ಸನ್ಮಾನ ಸಮಾರಂಭ

ಮಾರ್ಗಶಿರ ಶುದ್ಧಚೌತಿ (28-11-2011) ರಂದು ಬೆಳಿಗ್ಗೆ ಬಾನಿನಲ್ಲಿ ದಿನಕರನ ಉದಯಕ್ಕೆ ಮೊದಲೇ ಆಡಳಿತ ಮಂಡಳಿಯ ಅನೇಕ ಸದಸ್ಯರೂ, ಉತ್ಸಾಹೀ ಭಕ್ತ ಜನರೂ, ಸಿಬ್ಬಂದಿ ವರ್ಗದವರೂ ಬೆಳಗ್ಗಿನ ಪೂಜೆಯಾಗುತ್ತಿದ್ದಂತೆ ಶ್ರೀದೇವರ ಸನ್ನಿಧಿಯಲ್ಲಿ ಪ್ರಾರ್ಥನೆಗಾಗಿ ಸೇರಿದರು. ಶ್ರೀದೇವರ ಮುಂದೆ ಉತ್ಸವದ ಸುಸಂಪನ್ನತೆಗಾಗಿ ಹಾಗೂ ಯಶಸ್ಸಿಗಾಗಿ ಫಲನ್ಯಾಸ ಮಾಡಿ ಪ್ರಾರ್ಥಿಸಲಾಯಿತು.

ಚಪ್ಪರ ಪೂಜೆ, ತೋರಣ ಪೂಜಾದಿಗಳನ್ನು ಪೂರೈಸಿ, ಗೋಪೂಜಾ, ಅಶ್ವಪೂಜಾ ಹಾಗೂ ಗಜಪೂಜೆಯನ್ನು ಸಾಂಕೇತಿಕವಾಗಿ ಕೈಗೊಳ್ಳಲಾಯಿತು. ಅದಾಗಲೇ ತಂತ್ರಿವರ್ಯರು ಮೃತ್ತಿಕಾ ಪೂಜೆ ಹಾಗೂ ಗಂಗಾವರುಣ ಪೂಜೆಗಳನ್ನು ನೆರವೇರಿಸಿ ಮೃತ್ತಿಕೆಯನ್ನು ದೇವಳಕ್ಕೆ ತಂದು ಅಂಕುರಾರ್ಪಣೆಯನ್ನು ನೆರವೇರಿಸಲಾಯಿತು. ಶ್ರೀದೇವರ ಬಲಿ ಹೊರಟು ಕ್ಲಪ್ತ ಸಮಯದಲ್ಲಿ ಮುಹೂರ್ತಕ್ಕೆ ಸರಿಯಾಗಿ, ಧರ್ಮದರ್ಶಿಗಳ ಸಮಕ್ಷಮದಲ್ಲಿ ಧ್ವಜಾರೋಹಣವಾಯಿತು. ಮಧ್ಯಾಹ್ನ ನವಕ ಅಭಿಷೇಕ ಮಹಾಪೂಜೆಯೊಂದಿಗೆ ನಡೆದ ಅನ್ನದಾನದಲ್ಲಿ ಸುಮಾರು 500ರಷ್ಟು ಭಕ್ತ ಜನರು ಪ್ರಸಾದ ಸ್ವೀಕರಿಸಿದರು. ಸಾಯಂಕಾಲ ಮಹಾರಂಗಪೂಜೆಯು ಶ್ರೀದೇವರಿಗೆ ಅರ್ಪಿಸಲ್ಪಟ್ಟು ಶ್ರೀಯುತ ಶ್ರೀನಾಥ ಹೆಜಮಾಡಿಯವರು ಇದರ ಸೇವಾದಾರರಾಗಿ ಸಹಕರಿಸಿದರು.

ಶ್ರೀದೇವರ ಬಲಿ ಹೊರಟು ಚಿತ್ರಕೂಟ ನಾಗಬನಕ್ಕೆ ತೆರಳಿ ಅಲ್ಲಿ ಕಂಬಳಾದಿ ನಾಗ ದೇವರಿಗೆ ಪಂಚಾಮೃತಾಭಿಷೇಕ ಪುರಸ್ಸರ ಷೋಡಶೋಪಚಾರ ಪೂಜೆಯ ನಂತರ ಮಂಗಳಾರತಿ ಬೆಳಗಿ, ಸನ್ನಿಧಿಯಲ್ಲಿ ಪ್ರಾರ್ಥಿಸಿ ಮೂಲ ಮೃತ್ತಿಕಾ ಪ್ರಸಾದವನ್ನು ಸ್ವೀಕರಿಸಲಾಯಿತು. ನಂತರ ಉತ್ಸವ ಬಲಿ ನೆರವೇರಿತು.

ಮಾರ್ಗಶಿರ ಶುದ್ಧ ಪಂಚಮಿ (29-11-2011) ದಿನ ಪ್ರಾತಃಕಾಲ ಶ್ರೀದೇವರ ಪ್ರಾತಃಬಲಿ, ನಿತ್ಯಪೂಜೆಯಾಗುತ್ತಿದ್ದಂತೆ ನೆರೆದಿದ್ದ ಭಕ್ತ ಜನರು ಸುಬ್ರಹ್ಮಣ್ಯ ಸ್ವಾಮಿ ಹಾಗೂ ಚಿತ್ರಕೂಟ ನಾಗಬನದಲ್ಲಿನ ಕಂಬಳ ನಾಗ ಸನ್ನಿಧಿಯಲ್ಲಿ ಸೇವೆಗಳನ್ನು ಸಲ್ಲಿಸಲು ಉದ್ಯುಕ್ತರಾದರು. ಶ್ರೀದೇವರಿಗೆ ನವಕಾಭಿಷೇಕ, ಸರ್ವಾಲಂಕಾರವಾಗಿ ಮಹಾಪೂಜೆ ಹಾಗೂ ಅನ್ನಸಂತರ್ಪಣೆ ನೆರವೇರಿ, 1000ಕ್ಕೂ ಮಿಕ್ಕಿ

(8ನೇ ಪುಟಕ್ಕೆ....)

# ಹೀಗೊಂದು ನಮ್ಮ ಪ್ರವಾಸ.....

– ಪಿ.ರಾಮಚಂದ್ರ ಕೊಠಾರಿ, ಪರ್ಕಳ

ನಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಹೊರ ದೇಶಕ್ಕೆ ಹೋಗಬೇಕೆಂದು ಬಹಳ ಸಲ ಯೋಚಿಸಿದ್ದೆವು. ನಮಗೆ ಜಪಾನ್, ಸಿಂಗಾಪೂರ, ಮಲೇಶ್ಯಾಗಳಿಗೆ ಹೋಗುವ ಅವಕಾಶಗಳು ಬಂದರೂ ಹೋಗಲು ಆಗಲಿಲ್ಲ. ಕಡೆಗೂ ನಮ್ಮ ಮನಸ್ಸಿನಂತೆ ನಾನು ಮತ್ತು ನನ್ನ ಹೆಂಡತಿ ಜ್ಞಾನೇಶ್ವರಿಯೊಂದಿಗೆ ಸಿಂಗಾಪುರ ಪ್ರವಾಸ ಹೊರಡುವುದೆಂದು ನಿಶ್ಚಯಿಸಿ ತಾ.26-11-2011ರಂದು ನಮ್ಮ ಪರ್ಕಳದ ಮನೆಯಿಂದ ರಾತ್ರಿ ಬೆಂಗಳೂರಿಗೆ ಹೊರಟೆವು. ಮರುದಿನ ತಾ.27-11-2011ರಂದು ಬೆಂಗಳೂರಿನ ಮಗನ ಮನೆಯಲ್ಲಿ ಇದ್ದು ಅದೇ ದಿನ ರಾತ್ರಿ 12-40ರ ವಿಮಾನದಲ್ಲಿ ಸಿಂಗಾಪೂರಕ್ಕೆ ಹೊರಟು, ಮರುದಿನ ಬೆಳಿಗ್ಗೆ 7-30ಕ್ಕೆ ಸಿಂಗಾಪುರ ತಲುಪಿದೆವು. ಆಗ ನನ್ನ ಕೈಗಡಿಯಾರ ಭಾರತೀಯ ಕಾಲಮಾನ ಬೆಳಿಗ್ಗೆ 5-00 ಗಂಟೆ ತೋರಿಸುತ್ತಿತ್ತು. ನಂತರ ಇಲ್ಲಿನ ಸಮಯ ಹೊಂದಿಸಿಕೊಂಡು ಸಿಂಗಾಪುರಕ್ಕೆ ಕಾಲಿಟ್ಟೆವು. ವಿಮಾನ ನಿಲ್ದಾಣಕ್ಕೆ ಮಗ ಸುದೀಪ್ ಮತ್ತು ಸೊಸೆ ಅನಿತಾ ಬಂದಿದ್ದರು. ಬರುವಾಗ ವಿಮಾನದಲ್ಲಿ ನಮ್ಮ ಸಂಬಂಧಿ ಪ್ರಿಯಾ ರಾವ್ ಇದ್ದುದು ನಮಗೆ ಸಹಕಾರಿ ಯಾಯಿತು. ಇಲ್ಲಿ ಈಶುನ್ ರಿಂಗ್‌ರೋಡಿನ ಹತ್ತಿರ ನಮ್ಮ ಮನೆ ಇದೆ. ಆ ದಿನ ವಿಶ್ರಾಂತಿ ಬಳಿಕ ನಾವು 'ಹಾಪಾರ್ ವಿಲ್ಲ' ಎಂಬ ಮೂರ್ತಿಗಳ ಗೊಂಬೆ ಕೆತ್ತನೆಯನ್ನು ನೋಡಿದೆವು. ಇಲ್ಲಿ ಹಳೆಯ ಕಾಲದ ಸಿಂಗಾಪುರದ ಚರಿತ್ರೆ ಇರುವ ಸಾವಿರಾರು ಗೊಂಬೆಗಳು ಇದ್ದುವು.

ಇಲ್ಲಿನ ರಸ್ತೆಗಳಲ್ಲಿ ಸಂಚರಿಸುವುದೇ ಒಂದು ಸಂತೋಷದ ವಿಷಯ. ಇಲ್ಲಿ ಸ್ವಚ್ಛತೆಗೆ ಅತೀ ಹೆಚ್ಚಿನ ಗಮನ ಕೊಡುತ್ತಾರೆ. ರಸ್ತೆಯ ಎರಡೂ ಕಡೆ ಎಲ್ಲಿ ನೋಡಿದರಲ್ಲಿ ಗಗನ ಚುಂಬಿ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳು, ಫ್ಲೈ ಓವರ್‌ಗಳು, ಏಕಮುಖವಾಗಿ 4-5 ವಾಹನಗಳು ಸಂಚರಿಸುವ ವಿಶಾಲ ರಸ್ತೆಗಳು ಇವೆ. ಇಲ್ಲಿ ಎಲ್ಲಿ ಹೋದರೂ ಇರುವ ಪ್ರದೇಶವೆಂದರೆ ವಿಶಾಲವಾದ ಹಸಿರು ಪಾರ್ಕ್‌ಗಳು. ಇಲ್ಲಿ ಹೆಚ್ಚಾಗಿ ಚೈನೀಸ್ ಜನರಿದ್ದು, ನಮ್ಮ ಭಾರತ ದೇಶದ ತಮಿಳರೂ ಬಹಳ ಇದ್ದಾರೆ. ಇಲ್ಲಿ ಎಲ್ಲರೂ ಮಕ್ಕಳಿಂದ, ಮುದುಕರವರೆಗೆ, ಗಂಡಸರು, ಹೆಂಗಸರು ಚಡ್ಡಿಧಾರಿಗಳೇ ಆಗಿದ್ದಾರೆ. ಇಲ್ಲಿ ಹೆಚ್ಚಾಗಿ ಜನರು ಬಸ್ಸಿಗಿಂತ ರೈಲನ್ನು ಇಷ್ಟಪಡುತ್ತಾರೆ. ಪ್ರತಿ 2 ನಿಮಿಷಕ್ಕೆ ಒಂದರಂತೆ ರಾತ್ರಿ 12ರ ವರೆಗೆ ರೈಲು ಸಂಚಾರ ಇರುತ್ತದೆ. ಆ ದಿನ ಸಂಜೆ ನಾವು ಮನೆಯ ಹತ್ತಿರದ ಮಾರಿಯಮ್ಮ, ಗಣೇಶ, ಸುಬ್ರಹ್ಮಣ್ಯ ಇತ್ಯಾದಿ 50ಕ್ಕೂ ಮಿಕ್ಕಿ ದೇವರಿರುವ ಆಧುನಿಕ ಶೈಲಿಯ ದೇವಸ್ಥಾನ ನೋಡಿದೆವು. ಮರುದಿನ ವಿಶ್ರಾಂತಿ ಬಳಿಕ ಇಲ್ಲಿನ ಪ್ರಸಿದ್ಧ ಮೃಗಾಲಯಕ್ಕೆ ಹೋದೆವು. ಇವು ನಮ್ಮ ಮೈಸೂರು, ಬೆಂಗಳೂರಿನ ಮೃಗಾಲಯದಂತೆ ಇರದೆ ವಿಭಿನ್ನವಾಗಿದೆ. ಇಲ್ಲಿ ಅಪರೂಪದ ಪ್ರಾಣಿ ಪಕ್ಷಿಗಳಲ್ಲದೆ, ಆನೆಗಳ ಪ್ರದರ್ಶನ, ಮಳೆ ಕಾಡು, ನೈಟ್ ಸಫಾರಿ ಕೂಡ ಇದೆ. ಮನೆಯಲ್ಲಿ ತಿಂಡಿ, ಊಟವನ್ನು ತೆಗೆದುಕೊಂಡು ಹೋದದ್ದು ಅನುಕೂಲ ಆಯಿತು.

ಭಾರತಕ್ಕೆ ಹೋಲಿಸಿದರೆ ಸಿಂಗಾಪುರ ಬಹಳ ದುಬಾರಿ ದೇಶವಾಗಿದೆ. ಇಲ್ಲಿ ಏನೂ ಬೆಳೆಯುವುದಿಲ್ಲ. ಹೆಚ್ಚಾಗಿ ಚೀನಾ, ನ್ಯೂಝಿಲ್ಯಾಂಡ್, ಆಸ್ಟ್ರೇಲಿಯಾ ಇತ್ಯಾದಿ ದೇಶಗಳಿಂದ ತರಕಾರಿ, ಹಾಲು ತರಿಸುತ್ತಾರೆ. ಇದು ಏಷ್ಯಾಖಂಡದ 6ನೇ ದುಬಾರಿ ದೇಶವಾಗಿದೆ. ಇಲ್ಲಿ ಭ್ರಷ್ಟಾಚಾರ ಬಹಳ ಕಡಿಮೆ ಇದೆ.

ಮರುದಿನ ನಾವು ಇಲ್ಲಿನ ಪ್ರಸಿದ್ಧ ಬೊಟಾನಿಕಲ್ ಗಾರ್ಡನ್ ನೋಡಲು ಹೋದೆವು. 10 ಎಕ್ರೆ ವಿಸ್ತಾರವಾದ ಈ ಗಾರ್ಡನ್‌ನಲ್ಲಿ ಎಲ್ಲಾ ತರದ ಔಷಧೀಯ ಗಿಡಗಳು, 100ಕ್ಕೂ ಅಧಿಕ ವರ್ಷದ ಮರಗಳು, ವಿಶಾಲವಾದ ಬಯಲು ಪ್ರದೇಶ ಗಳು ಇವೆ. ಇದು ಫೋಟೋ ತೆಗೆದುಕೊಳ್ಳಲು ಬಹಳ ಉತ್ತಮ ಪ್ರದೇಶವಾಗಿದೆ. ಸಂಜೆ ಇಲ್ಲಿರುವ ಪ್ರಸಿದ್ಧ ಆರ್ಚಡ್ ರಸ್ತೆ ಪ್ರದೇಶಕ್ಕೆ ಹೋದೆವು. ಇಲ್ಲಿ ಮೈಲುಗಟ್ಟಲೆ ನೀಲಿ ಬಣ್ಣದ ವಿದ್ಯುತ್ ನಕ್ಷತ್ರ ಮಾಲೆಗಳನ್ನು ರಾತ್ರಿ ನೋಡುವುದು ಚೆಂದ. ನಾವು ಕ್ರಿಸ್‌ಮಸ್‌ನಲ್ಲಿ ಹೋದ ಕಾರಣ, ಇನ್ನೂ ವಿಶೇಷ ಅಲಂಕಾರವಿತ್ತು. ಆ ದಿನ ಕ್ರಿಸ್‌ಮಸ್ ಮೆರವಣಿಗೆ ಇದ್ದು, ನಮ್ಮ ಉಡುಪಿ ಪರ್ಯಾಯದ ನೆನಪಾಯಿತು.

ಇಲ್ಲಿ ಎಲ್ಲರೂ ಡೆಬಿಟ್, ಕ್ರೆಡಿಟ್ ಕಾರ್ಡುಗಳಲ್ಲೇ ವ್ಯವಹಾರ ಮಾಡುತ್ತಾರೆ. ನಗದು ವ್ಯವಹಾರ ಬಹಳ ಕಡಿಮೆ ಎಂದೇ ಹೇಳಬಹುದು. ಇಲ್ಲಿ ಶ್ರಮದಾಯಕ ಕೆಲಸಗಳನ್ನು ಹೆಚ್ಚಾಗಿ, ಬರ್ಮಾ, ಬಾಂಗ್ಲಾ, ಭಾರತದಿಂದ ಬಂದ ತಮಿಳರು ಮಾಡುತ್ತಾರೆ. ನಂತರ ನಾವು ಇಲ್ಲಿ ಲಿಟ್ಲ್ ಇಂಡಿಯಾ ಎಂಬ ಪ್ರದೇಶಕ್ಕೆ ಬಂದೆವು. ಇಲ್ಲಿನ ಪ್ರಸಿದ್ಧ ಶ್ರೀನಿವಾಸ ದೇವರ ದರ್ಶನ ಪಡೆದೆವು. ಇಲ್ಲಿನ ದೇವರ ಹುಂಡಿಯಲ್ಲಿ ಕನ್ನಡದ 'ಹುಂಡಿ' ಎಂದು ಬರೆದದ್ದನ್ನು ನನ್ನ ಮಗ ತೋರಿಸಿದಾಗ, ಬಹಳ ಸಂತೋಷ ಆಯಿತು. ನಂತರ ಇಲ್ಲಿನ ಮುಸ್ತಾಫಾ ಎಂಬ 2 ಮೈಲು ವಿಸ್ತಾರದ ವ್ಯಾಪಾರೀ ಮಳಿಗೆಯನ್ನು ನೋಡಿದೆವು. ಇಲ್ಲಿ ಎಲ್ಲವೂ ಭಾರತೀಯಮಯವಾಗಿದೆ.

ನಂತರ ಮರ್ಲಿಯನ್, ಮಾರೀನಾ ಬೇ ಇತ್ಯಾದಿ ಸ್ಥಳಗಳನ್ನು ನೋಡಿದೆವು. ಇಲ್ಲಿ ವಿಶಾಲವಾದ ಸರೋವರದಲ್ಲಿ ಸಾವಿರಾರು ಬಲೂನ್‌ಗಳನ್ನು ತೇಲಿಬಿಟ್ಟುದ್ದು ಬಹಳ ಚೆಂದವಾಗಿದೆ. 60 ಅಡಿಗಳಿಗೂ ಎತ್ತರದ ಇಲ್ಲಿನ ರಾಷ್ಟ್ರೀಯ ಲಾಂಛನ ಸಿಂಹದ ಬಾಯಿಯಿಂದ ನೀರಿನಧಾರೆ ಬೀಳುವುದು ನೋಡುವಾಗ ಆನಂದವಾಗುತ್ತದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ನೂರಾರು ಮಹಡಿಗಳಿರುವ ಕಟ್ಟಡಗಳನ್ನು, ಮಧ್ಯಾಹ್ನದ ಹೊತ್ತಿನಲ್ಲಿ ತಂಪಾಗಿರುವ, ಸಿನೇಮಾ ಶೂಟಿಂಗ್ ನಡೆಯುವ ರಸ್ತೆಯನ್ನು ನೋಡಿದೆವು. ಇಲ್ಲಿ I MAX ಥಿಯೇಟರ್‌ನಲ್ಲಿ Wild Life ಸಿನೇಮಾವನ್ನು '300' ಅಡಿ ವಿಶಾಲವಾದ ಪರದೆಯ ಮೇಲೆ ನೋಡುವಾಗ ನಾವೇ ಮೇಲೆ ಕೆಳಗೆ ಹೋದಂತೆ ಭಾಸವಾಗುತ್ತದೆ.

ನಂತರ 2 ದಿನ ವಿಶ್ರಾಂತಿ ಬಳಿಕ, ಇಲ್ಲಿಂದ ಮಲೇಶ್ಯಾದ ರಾಜಧಾನಿ ಕೌಲಾಲಂಪುರ್‌ಗೆ ಹೋದೆವು. ಇಲ್ಲಿ ಬಹಳ ಪ್ರಸಿದ್ಧವಾದ ಪ್ರದೇಶಗಳಿವೆ. ಅದರಲ್ಲೂ ಪೆಟ್ರೋನಾಸ್ ಎಂಬ 500 ಅಡಿ ಎತರದ ಜೋಡಿ ಕಟ್ಟಡ ಸಮುಚ್ಚಯವನ್ನು ನೋಡಿದೆವು. ಇಲ್ಲಿ ನಮ್ಮಲ್ಲಿನ ವಿಧಾನಸೌಧದಂತೆ ಎಲ್ಲಾ ಸರಕಾರಿ ಕಛೇರಿಗಳಿವೆ. ಇದನ್ನು ರಾತ್ರಿ ಹೊತ್ತು ನೋಡುವುದೇ ಬಹಳ ಚೆಂದ. ಇಲ್ಲಿಂದ ನಾವು ಜೆಂಟಿಂಗ್ (Genting) ಎಂಬ ಪರ್ವತ ಶಿಖರವನ್ನು ಕೇಬಲ್ ಕಾರಿನಲ್ಲಿ ಮೇಲೇರಿ ಹೋಗಿ ನೋಡಿದೆವು. 8 ಜನರು ಕುಳಿತು ಕೊಳ್ಳುವ ಡೋಲಿಗಳಲ್ಲಿ ಕುಳಿತು ಗಾಳಿಯಲ್ಲಿ ತೇಲಾಡುತ್ತಾ, ಕೆಳಗೆ ನೋಡುವಾಗ ಮೈ ಜುಂ ಎನ್ನುತ್ತದೆ. 100ಕ್ಕೂ ಮಿಕ್ಕಿ ಡೋಲಿಗಳು ಕಬ್ಬಿಣದ ದಪ್ಪ ಸರಿಗೆಯಲ್ಲಿ ಹೋಗುತ್ತಾ ಇರುತ್ತವೆ. ಬೆಟ್ಟದ ಮೇಲೆ ಕೂಡಾ ವಿಶಾಲವಾದ ಕಟ್ಟಡ, ಹೋಟೆಲ್, ಮಾಲ್‌ಗಳಿವೆ.

ಮರುದಿನ ನಾವು ಬಾಟೂಕೇವ್ಸ್ ಎಂಬ 400 ಮೆಟ್ಟಿಲುಗಳಿರುವ ಗುಹಾದೇವಾಲಯವನ್ನು ನೋಡಿದೆವು. ಇಲ್ಲಿ ನಮ್ಮ ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳಿರುವ ಪ್ರತಿಮೆಗಳನ್ನು ನೋಡಿದೆವು. ಸಹಜವಾಗಿ ಇಲ್ಲಿನ ಜನರಂತೆ ವಾನರ ಸೇನೆಯೇ ಇದ್ದಿತು. ಇಲ್ಲಿರುವ ಜಗತ್ತಿನಲ್ಲೇ ಅತೀ ಎತ್ತರದ ಕಾರ್ತಿಕೇಯನ ಮೂರ್ತಿಯು ಬಹಳ ಮನೋಹರವಾಗಿದೆ. ರಾತ್ರಿ 11 ಗಂಟೆಗೆ ರೈಲಿನಲ್ಲಿ ಕೌಲಾಲಂಪುರ್ ಹೊರಟು ಬೆಳಿಗ್ಗೆ 7ಕ್ಕೆ ಪುನಃ ಸಿಂಗಾಪುರ ತಲುಪಿದೆವು.

2 ದಿನದ ವಿಶ್ರಾಂತಿ ಬಳಿಕ ಪುನಃ ಅಗ್ರೋ ಪಾರ್ಕ್ ಎಂಬ ಇನ್ನೊಂದು ವಿಶೇಷ ಸ್ಥಳವನ್ನು ನೋಡಲು ಹೋದೆವು. ಇದು ಎಲ್ಲಾ ಪಾರ್ಕುಗಳಂತಿರದೆ, ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿ ಹೆಂಡರ್‌ಸನ್ ವೇವ್ ಎಂಬ 3 ಕಿ.ಮೀ. ಉದ್ದದ, ಅತೀ ಎತ್ತರದಲ್ಲಿರುವ ಅಂಕುಡೊಂಕಾದ ಸೇತುವೆ ಇದೆ. ಇಲ್ಲಿ ನಾವು ನಡೆಯುವಾಗ ಕೆಳಗಡೆ ಪರ್ವತಗಳು, ಗುಡ್ಡಗಳು, ರಸ್ತೆಗಳು ನಾವು ನಡೆಯುವ ಸ್ಥಳದಲ್ಲಿಯೇ ಕಾಣುವಂತೆ ಇದ್ದು, ಕೆಳಗಡೆ ನೋಡುವಾಗ ಮೈ ಜುಂ ಎನ್ನುತ್ತದೆ. ಈ ಸೇತುವೆಯು ಕಬ್ಬಿಣದ ಜಾಲರಿಯಿಂದ ಗಟ್ಟಿಮುಟ್ಟಾಗಿ ಮಾಡಿರುವುದರಿಂದ ಕೆಳಗಿನ ದೃಶ್ಯಗಳನ್ನು ನಾವು ನೋಡಬಹುದು. ನಗರ ಪ್ರದೇಶದಲ್ಲಿದ್ದರೂ ದಟ್ಟ ಕಾಡಿನಲ್ಲಿ ಹೋಗುವ ಅನುಭವ ಆಗುತ್ತದೆ. ಇಲ್ಲಿರುವ ಕಮಾನಿನಂತಹ ರಚನೆಯಲ್ಲಿ ಕಾಮನ ಬಿಲ್ಲಿನ ಬಣ್ಣಗಳನ್ನು ರಾತ್ರಿ ಹೊತ್ತು ನೋಡಲು ಸಂತೋಷವಾಗುತ್ತದೆ. ಇದನ್ನು ಬ್ರಿಟಿಷ್ ಅಧಿಕಾರಿಯಾಗಿದ್ದ ಹೆಂಡರ್‌ಸನ್ ಎಂಬಾತ ನಿರ್ಮಿಸಿದನೆನ್ನುತ್ತಾರೆ. ನಂತರ ನಾವು ಸಂಟೋಸ ಎಂಬ ಸ್ಥಳವನ್ನು ನೋಡಲು ಹೋದೆವು. ಇಲ್ಲಿ ಎಷ್ಟು ನೋಡಿದರೂ ಸಾಲದು. ನಾವು ಇಲ್ಲಿ ಕೆಲವನ್ನು ಮಾತ್ರ ನೋಡಿದೆವು. ಅದರಲ್ಲೂ ಅಂಡರ್‌ವಲ್ಡ್ ಪಾರ್ಕ್‌ನಲ್ಲಿ ನಾವು ಸಮುದ್ರದ ಒಳಗಿನಿಂದ ಹೋಗುವಂತೆ ಭಾಸವಾಗುತ್ತದೆ. ಅಲ್ಲಿರುವ ಎಲ್ಲಾ ಜಾತಿಯ ಜಲಚರಗಳು, ಮೀನುಗಳು, ತಿಮಿಂಗಿಲಗಳು, ಚಾಪೆ ಮೀನು, ಸೋರ್ಡ್ ಮೀನು, ಅಕ್ಟೋಪಸ್‌ಗಳು ಚಲಿಸುವುದನ್ನು ನೋಡಬಹುದು. ನಂತರ ಇಲ್ಲಿ ಡಾಲ್ಫಿನ್ ಪ್ರದರ್ಶನ ನೋಡಿದೆವು. ಇಲ್ಲಿರುವ ಡಾಲ್ಫಿನ್ ಜಾತಿಯ ಮೀನುಗಳು, ಸೀಲ್‌ಗಳು ಮನುಷ್ಯರ ಆಜ್ಞೆಯಂತೆ ನೀರಿನ ಒಳಗಿನಿಂದ ಹೊರಬಂದು ಆಡುವ ಆಟವು ನೋಡಲು ಖುಷಿ ಕೊಡುತ್ತದೆ. ಇವುಗಳು ಸಾಲಾಗಿ ಹಾರುವುದು, ಸರೋವರಕ್ಕೆ ಸುತ್ತು ಬರುವುದು, ಸೀಲ್‌ಗಳು ಕೈಚಪ್ಪಾಳೆ ತಟ್ಟುವುದು ಬಹಳ ಸುಂದರವಾಗಿದೆ.

ಇದಲ್ಲದೆ ನಾವು ಸಯನ್ಸ್ ಪಾರ್ಕನ್ನು ನೋಡಿದಾಗ ಇದನ್ನೆಲ್ಲಾ ಹೇಗೆ ನಿರ್ಮಿಸಿದ್ದಾರೆ ಎಂದು ಆಶ್ಚರ್ಯವಾಯಿತು. ಇಲ್ಲಿ ಎಲ್ಲವನ್ನೂ ಪಾರ್ಕ್ ಎಂದು ಕರೆಯುತ್ತಾರೆ. ಇದು ಮರಗಿಡಗಳ ಪಾರ್ಕ್ ಆಗಿರದೆ, ಅತಿ ವಿಚಿತ್ರ ಪ್ರದರ್ಶನ ಮಳಿಗೆಗಳು ಆಗಿರುತ್ತವೆ. ಇನ್ನೂ ಬಹಳಷ್ಟು ನೋಡಲು ಇದ್ದರೂ, ಬೇರೆ ಕಾರಣಗಳಿಂದ ನೋಡಲಾಗಲಿಲ್ಲ. ಮರೆಯಲಾಗದ ನೆನಪುಗಳನ್ನು ಹೊತ್ತು ನಾವು ಡಿಸೆಂಬರ್ 30ರಂದು ರಾತ್ರಿ 9-45ಕ್ಕೆ ವಿಮಾನದಲ್ಲಿ ಬೆಂಗಳೂರಿಗೆ ಹೊರಟು ಮಧ್ಯರಾತ್ರಿ 1 ಗಂಟೆಗೆ ತಲುಪಿ, ಮನೆಯನ್ನು ಸೇರಿದೆವು. ನಂತರ ಅಲ್ಲಿ 2 ದಿನ ಇದ್ದು ಹೊಸ ವರ್ಷ 2012ನ್ನು ಆಚರಿಸಿ ತಾ.2-1-2012ರಂದು ಪರ್ಕಳ ತಲುಪಿದೆವು.

ಕೊನೆಯದಾಗಿ ನನ್ನ ಅನಿಸಿಕೆ ಏನೆಂದರೆ, ಸಿಂಗಾಪುರ ಎಲ್ಲರೂ ಒಮ್ಮೆ ಸಾಧ್ಯವಿದ್ದರೆ ನೋಡಬೇಕಾದ ನಮಗೆ ಸಮೀಪವಿರುವ ದೇಶವಾಗಿದೆ. ಇಲ್ಲಿ ಎಲ್ಲವೂ ಇದೆ. ಆದರೆ ಜನರಿಗೆ ಅವರ ನೆರೆಮನೆ ಯವರ ಪರಿಚಯವೇ ಇರುವುದಿಲ್ಲ. ಜನರು ಅಷ್ಟೊಂದು ಮೂಡಿಗಳು. ನಮ್ಮ ದೇಶದಂತೆ ಹಬ್ಬಗಳ ಆಚರಣೆ, ಉತ್ಸವ, ಸಡಗರ ಇಲ್ಲಿ ಕಾಣುವುದು ಅಪರೂಪ. ಹೂವನ್ನು ತೋಟದ ಗಿಡದಲ್ಲಿ ನೋಡುವುದೇ ಚೆಂದ ಎಂಬಂತೆ ನಮಗೆ ನಮ್ಮ ದೇಶ, ಜನರೇ ಚೆಂದ. ಪುನರ್ಜನ್ಮವಿರುವುದಾದರೆ, ನಮ್ಮ ಭಾರತ ದೇಶದಲ್ಲಿಯೇ ಜನಿಸಬೇಕು.

---

## ಪಾವಂಜೆ : ಚಂಪಾ ಷಷ್ಠಿ ಮಹೋತ್ಸವ ಮತ್ತು ಸನ್ಮಾನ ಸಮಾರಂಭ

(...7ನೇ ಪುಟದಿಂದ)

ಭಕ್ತರು ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.

ಮಾ। ಶು। ಷಷ್ಠಿ (ತಾ.30-11-2011) ರಂದು ಪ್ರಾತಃ ಬಲಿ, ಪೂಜೆಯು ನೆರವೇರುತ್ತಿದ್ದಂತೆ ವಿಶೇಷವಾಗಿ ನೂರಾರು ಭಕ್ತರು ಮಡೆಸ್ನಾನವನ್ನು ನಡೆಸಿದ ಬಳಿಕ ನವಕಾಭಿಷೇಕ, ಸರ್ವಾಲಂಕಾರಗಳು ಸಂಪನ್ನ ಗೊಂಡಿತು. ಈದಿನ ವಿಶೇಷವಾಗಿ ಸುಮಾರು 16 ಬಾಲವಟುಗಳಿಗೆ ಸಮಾರಾಧನೆಯ ಪುರಸ್ಸರವಾಗಿ ಬ್ರಹ್ಮಾಚಾರಿ ಆರಾಧನೆ ಹಾಗೂ ತುಲಾಭಾರ ಸೇವೆಯು ನೆರವೇರಿತು. 9-30ಕ್ಕೆ ಮಹಾಪೂಜೆಯಾಗಿ 10-30ಕ್ಕೆ ಬಲಿಹೊರಟು ಶ್ರೀದೇವರನ್ನು ನವೀಕೃತ ಪಾಕಶಾಲೆಗೆ ಕರೆತರಲಾಯಿತು. ಅಲ್ಲಿ ಪಲ್ಲಪೂಜೆಯಾದ ನಂತರ ಶ್ರೀಭೋಜ ಸೇರಿಗಾರ, ಅಶ್ವತ್ಥಪುರ ತಂಡದವರಿಂದ ನಾಗಸ್ವರ ವಾದನ ಪುರಸ್ಸರವಾಗಿ ಹಾಗೂ ಚೆಂಡೆಸುತ್ತಿನೊಂದಿಗೆ ಉತ್ಸವವು ಸಂಪನ್ನಗೊಂಡು, 11-30ಕ್ಕೆ ಅನ್ನಸಂತರ್ಪಣೆಯು ಪ್ರಾರಂಭಗೊಂಡಿತು. ದೇವಳದ ಬಾಕಿಮಾರು ಗದ್ದೆಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆದ ಅನ್ನಪ್ರಸಾದ ವಿತರಣೆಯಲ್ಲಿ 8000ಕ್ಕೂ ಮಿಕ್ಕಿ ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಸುಮಾರು 8-30ಕ್ಕೆ ಗಗ್ಗರ ಸೇವೆಯಾಯಿತು. ಶ್ರೀದೇವರ ಬಲಿಹೊರಟು ಉತ್ಸವ ಬಲಿಗಳು ಸಂಪನ್ನಗೊಂಡು ಭೇಟಿಯ ಕಾರ್ಯಕ್ರಮವು ಬಹಳ ವಿಜೃಂಭಣೆಯಿಂದ ಹಾಗೂ ಅಷ್ಟೇ ಸೌಮ್ಯವಾಗಿ ಸಂಪನ್ನಗೊಂಡಿತು. ನಂತರ ಅವಭೃತಾದಿಗಳು ನಡೆಸಲ್ಪಟ್ಟು ಧ್ವಜಾವರೋಹಣ ಮಾಡಲಾಯಿತು. ಮಂತ್ರಾಕ್ಷತೆ ಹಾಗೂ ಪ್ರಸಾದ ವಿತರಣೆಯ ನಂತರ ಶ್ರೀಅಣ್ಣಪ್ಪ ಸ್ವಾಮಿಗೆ ನರ್ತನ ಸೇವೆ ನಡೆಯಿತು. ಒಟ್ಟು ಕಾರ್ಯಕ್ರಮವು ರಾತ್ರಿಯ 12 ಗಂಟೆಯ ಒಳಗೆ ಪೂರ್ಣಗೊಂಡದ್ದು ಕ್ಷೇತ್ರದಲ್ಲಿ ಒಂದು ಅಪೂರ್ವ ದಾಖಲೆಯಾಯಿತು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಾರ್ತಿಕ ಅಮಾವಾಸ್ಯೆಯಂದೇ ಪ್ರಾರಂಭ ಗೊಂಡಿದ್ದ ಶ್ರೀರಾಮಚಂದ್ರಾಪುರ ಮೇಳದವರು ನಡೆಸಿಕೊಟ್ಟಿದ್ದ ಯಕ್ಷಗಾನ ಸಪ್ತಾಹವು ಸಪ್ತಮಿಯಂದು ಕೊನೆಗೊಂಡಿದ್ದು ಈ ವರ್ಷ ವಿಶೇಷವಾಗಿ ಸಮಗ್ರ ರಾಮಾಯಣವನ್ನು ಮೂಲವಾಗಿರಿಸಿಕೊಂಡು ನಡೆದ ಪ್ರದರ್ಶನಗಳು ಯಕ್ಷಕಲಾಭಿಮಾನಿಗಳ ಮನಸೂರೆಗೊಂಡವು. ಕೊನೆಯ ದಿನ ಈ ವರ್ಷದ ವಿಶೇಷ ಪ್ರಸಂಗ "ಮಹಾಮುನಿ ಅಗಸ್ತ್ಯ"ವನ್ನು ಪ್ರದರ್ಶಿಸಿದರು. ಷಷ್ಠಿಯ ದಿನ ಮಧ್ಯಾಹ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಮ್ಮವರೇ ಆದ ಶ್ರೀಮತಿ ಸುಶೀಲಾ ವಿದ್ಯಾರಣ್ಯರವರ ಸುಮಧುರ ಸುಗಮ ಸಂಗೀತ ಕಾರ್ಯಕ್ರಮವು ಕೇಳುಗರ ಮನಸೂರೆಗೊಂಡಿತು.

**ಸನ್ಮಾನ ಸಮಾರಂಭ :** ಈ ಸಂದರ್ಭದಲ್ಲಿ ಕಳೆದ 7 ವರ್ಷಗಳಲ್ಲಿ ನಡೆಸುತ್ತಿದ್ದಂತೆ ಈ ವರ್ಷವೂ ನಮ್ಮ ಸಮಾಜದ ಸಾಧಕರಾದ ಶ್ರೀಯುತ ನೀಲಾವರ ಲಕ್ಷ್ಮೀನಾರಾಯಣ ರಾವ್, ರಾಜ್ಯೋತ್ಸವ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕರು ಹಾಗೂ ಗಮಕಿಗಳು ಮತ್ತು ಶ್ರೀಯುತ ಎ.ಪಿ.ವೈ.ಶರ್ಮ, ನಿವೃತ್ತ ಅಭಿವೃದ್ಧಿ ಅಧಿಕಾರಿ, ಎಲ್.ಐ.ಸಿ. ಇವರನ್ನು ಹೃದಯ ಸ್ಪರ್ಶಿಯಾದ ಕಾರ್ಯಕ್ರಮದಲ್ಲಿ ಶ್ರೀದೇವರ ಸಮ್ಮುಖದಲ್ಲಿ ನಡೆದ ಸರಳ ಸಮಾರಂಭದಲ್ಲಿ ಶಾಲು ಹೊದೆಸಿ, ಫಲ ತಾಂಬೂಲ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರಗಳನ್ನು ಶ್ರೀದೇವರ ಪ್ರಸಾದ ರೂಪದಲ್ಲಿ ನೀಡಿ ಸನ್ಮಾನಿಸಲಾಯಿತು.

ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎ.ಪಿ.ವೈ.ಶರ್ಮರು ತನ್ನ ಬಾಲ್ಯಜೀವನಕ್ಕೂ ಈ ದೇವಳಕ್ಕೂ ತಮಗೂ ಇದ್ದ ನಂಟು ಹಾಗೂ ಮುಂದೆಯೂ ತನಗೆ ಈ ಕ್ಷೇತ್ರದ ಬಗ್ಗೆ ಇದ್ದ ಅಭಿಮಾನ, ಆತ್ಮೀಯತೆಗಳನ್ನು ಸ್ಮರಿಸಿಕೊಂಡರು. ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾಯರು ತಮ್ಮ ಆಸಕ್ತಿಯ ಗಮಕ ಮುಖೇನ ಸನ್ಮಾನಕ್ಕೆ ಉತ್ತರಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮೊಕ್ತೇಸರರೆಲ್ಲರೂ ಉಪಸ್ಥಿತರಿದ್ದರು.

**–ಸ್ಕಂದ ಸ್ವಾಮಿ, ಮುಕ್ಕ**

## ಮಾಂಗಲ್ಯಂ ತಂತುನಾನೇನ ....

ಪಾದೆಬೆಟ್ಟು ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಕುಮಾರ್‌ರಾವ್ ಇವರ ಪುತ್ರ **ಪರೀಕ್ಷಿತ** ಹಾಗೂ ಪಾವಂಜೆ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ ರಾವ್ ಇವರ ಪುತ್ರಿ **ಶರಧಿ** ಇವರ ವಿವಾಹವು ತಾ.07-12-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಪ್ರಭಾ ಮತ್ತು ಶ್ರೀ ಮುರಳೀಧರ ಶರ್ಮ ಇವರ ಪುತ್ರಿ **ದಿವ್ಯ** ಹಾಗೂ ಶ್ರೀಮತಿ ನಳಿನಿ ಮತ್ತು ಎಲ್ಲೂರು ಶ್ರೀ ವಾಸುದೇವರಾಯರ ಪುತ್ರ **ರೋಹಿತ್** ಇವರ ವಿವಾಹವು ತಾ.01-01-2012 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

ಶ್ರೀಮತಿ ಮತ್ತು ಶ್ರೀ ಶಂಭು ಶಂಕರರಾಯರ ಪುತ್ರ **ವಿನಯ** ಹಾಗೂ ಶ್ರೀಮತಿ ಮತ್ತು ಶ್ರೀ ಕೊಂಬೆಟ್ಟು ಸುಬ್ರಹ್ಮಣ್ಯ ರಾಯರ ಪುತ್ರಿ **ಶ್ರುತಿ** ಇವರ ವಿವಾಹವು ತಾ.25-01-2012ರಂದು ಎರ್ಮಾಳು ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★★

ಶ್ರೀಮತಿ ಜಯಾ ಡಿ.ರಾವ್ ಮತ್ತು ಶ್ರೀ ಪಿ. ದಿನೇಶ್ ರಾವ್ ಇವರ ಪುತ್ರಿ **ದೀಪ್ತಿ** ಹಾಗೂ ಶ್ರೀಮತಿ ಜಯಶ್ರೀ ಮತ್ತು ಶ್ರೀ ರವೀಂದ್ರಗುರುರಾವ್ ಹೆಬಸೂರು, ಗದಗೆ ಇವರ ಪುತ್ರ **ಸಂತೋಷ** ಇವರ ವಿವಾಹವು ತಾ.29-01-2012ರಂದು 8ನೇ 'ಸಿ' ಕ್ರಾಸ್, 1ನೇ 'ಜೆ' ಮೈನ್, ಗಿರಿನಗರ 2ನೇ ಹಂತ, ಬೆಂಗಳೂರು ಇಲ್ಲಿ ನೆರವೇರಿತು.

## ಅಭಿನಂದನೆ



### ಕು| ಸುಪ್ರಿಯಾ ಶ್ರೀನಿವಾಸ ರಾವ್

ಪ್ರಸಕ್ತ ಮುಂಬಯಿಯಲ್ಲಿ ವಾಸ್ತವ್ಯವಿರುವ ಅತ್ತೂರು ನಯನಾ ಶ್ರೀನಿವಾಸ ರಾವ್ ಮತ್ತು ದಿ| ಅತ್ತೂರು ಶ್ರೀನಿವಾಸ ರಾವ್ ದಂಪತಿಗಳ ಪುತ್ರಿ ಕು| ಸುಪ್ರಿಯಾ ಶ್ರೀನಿವಾಸ ರಾವ್‌ರವರು ಕಳೆದ ನವೆಂಬರ್ ತಿಂಗಳಲ್ಲಿ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ (Institute of Chartered Accountants of India) ನಡೆಸಿದ ವೃತ್ತಿಪರ ಲೆಕ್ಕಪರಿಶೋಧಕರ ಪರೀಕ್ಷೆಯಲ್ಲಿ (C.A.) ತೇರ್ಗಡೆ ಯಾಗಿದ್ದಾರೆ. ತನ್ನ 24ರ ಹರೆಯದಲ್ಲಿಯೇ ಈ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿರುವ ಕು|ಸುಪ್ರಿಯಾ ಎಸ್.ರಾವ್‌ರವರಿಗೆ ಶ್ರೀಶಾರದಾ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ನಿಧನ

### ಶ್ರೀಮತಿ ಗಿರಿಜಮ್ಮ

ದಿ| ಪಾಂಡೇಶ್ವರ ಸದಾಶಿವಯ್ಯನವರ ಧರ್ಮಪತ್ನಿ ಶ್ರೀಮತಿ ಗಿರಿಜಮ್ಮನವರು ತಾ.15-1-2012ರಂದು ಸಾಲಿಗ್ರಾಮ ಕಾರ್ಕಡದ ತಮ್ಮ ಸ್ವಗೃಹದಲ್ಲಿ ನಿಧನರಾಗಿರುತ್ತಾರೆ. ಇವರು ನಾಲ್ವರು ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಕೈರಾಣ ಗೋಪಾಲ ಹೆಬ್ಬಾರ್

ಬೆಂಗಳೂರು ನಾಗರಬಾವಿ 2ನೇ ಹಂತದ ನಿವಾಸಿಯಾಗಿದ್ದ ನಿವೃತ್ತ ಶಿಕ್ಷಕ ಶ್ರೀ ಕೈರಾಣ ಗೋಪಾಲ ಹೆಬ್ಬಾರರು ತಾ.23-12-2011ರಂದು ಅಲ್ಪಕಾಲದ ಅಸೌಖ್ಯದಿಂದ ವಿಧಿವಶರಾದರು. ಮೃತಕಾಲಕ್ಕೆ ಇವರಿಗೆ ಸುಮಾರು 86 ವರ್ಷ ವಯಸ್ಸಾಗಿದ್ದು ಇವರು ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು ಮತ್ತು ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

★★★ ★★★

### ಶ್ರೀಮತಿ ಸರೋಜಿನಿ ಅಮ್ಮ

ತಂತ್ರಾಡಿ ದಿ| ಉಪೇಂದ್ರ ಶ್ಯಾನುಭೋಗರ ಧರ್ಮಪತ್ನಿ ಶ್ರೀಮತಿ ಸರೋಜಿನಿ ಅಮ್ಮ (65 ವರ್ಷ) ಇವರು ತಾ.29-12-2011ರಂದು ನಿಧನರಾಗಿರುತ್ತಾರೆ. ಇವರು ಮೂವರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 13-02-2012 | **ಕುಂಭ ಸಂಕ್ರಮಣ** |
| 17-02-2012 | **ಏಕಾದಶೀ** |
| 20-02-2012 | **ಮಹಾಶಿವರಾತ್ರಿ** |
| 21-02-2012 | **ಅಮಾವಾಸ್ಯಾ** |
| 08-03-2012 | **ಹೋಳಿ ಹುಣ್ಣಿಮೆ** |
| 11-03-2012 | **ಸಂಕಷ್ಟಹರ ಚತುರ್ಥಿ** |
| 14-03-2012 | **ಮೀನ ಸಂಕ್ರಮಣ** |

## ಅಕ್ಷರ-ಕವನ

### ಅಕ್ಷರದಲ್ಲಿ 'ಅನುಭವ-ಆನಂದ'

**ಅ**ಗತ್ಯಕ್ಕಿಂತ ಹೆಚ್ಚಾಗಿ ಮಾತನಾಡಬೇಡಿ,
**ಆ**ರೋಗ್ಯ ಮತ್ತು ಆನಂದವನ್ನು ಜೀವನದಲ್ಲಿ ಕಳಕೊಳ್ಳದಿರಿ,
**ಇ**ನ್ನೊಬ್ಬರನ್ನು ಅವಲಂಬಿಸಿ ಜೀವಿಸಬೇಡಿ,
**ಈ**ಹೊತ್ತು ಆಹೊತ್ತು ಎನ್ನದೆ ಈ ದಿನದ ಕೆಲಸವನ್ನು ಇಂದೇ ಮುಗಿಸಿರಿ,
**ಉ**ತ್ತಮ ಆಲೋಚನೆ, ಉತ್ತಮ ಕಾರ್ಯಗಳು, ಉತ್ತಮ ಫಲ ನೀಡುತ್ತವೆ,
**ಊ**ಟದಲ್ಲಿ ಇತಿ-ಮಿತಿ ಇರಲಿ, ಸಮಯಕ್ಕೆ ಸರಿಯಾಗಿರಲಿ,
**ಋ**ಣವನ್ನು ಎಂದೂ ಇರಿಸಿಕೊಳ್ಳಬೇಡಿ,
**ಎ**ಲ್ಲರೊಡನೆ ಬೆರತು ಒಳ್ಳೆಯ ಮಾತನಾಡಿ,
**ಏ**ಕಾಂಗಿಯಾಗಿರಬೇಡಿ, ಏಕಾಏಕಿ ವಾದದಲ್ಲಿ ತೊಡಗಬೇಡಿ,
**ಐ**ಶ್ವರ್ಯ ಇದೆ ಎಂದು ದುಂದುವೆಚ್ಚ ಮಾಡಬೇಡಿ,
**ಒ**ತ್ತಡ ಮತ್ತು ಚಿಂತೆಯಿಂದ ದೂರವಾಗಿರಿ,
**ಓ**ರಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ,
**ಔ**ಷಧಗಳನ್ನು ಪರೀಕ್ಷಿಸದೆ ಸೇವಿಸಬೇಡಿ,
**ಅಂ**ಜಿಕೆ ಅನುಮಾನಗಳು ಆನಂದ ಜೀವನಕ್ಕೆ ಅಡ್ಡಿಯಾಗುತ್ತವೆ,
**ಅಹ**ಂಕಾರದಿಂದ ದೂರವಿರಿ, ಆಹ್ಲಾದಕರ ಜೀವನ ನಡೆಸಿರಿ.

**-ಶಂಕನರನಾರಾಯಣ ಪೆರುವಾಜೆ**
(ತುಂಗಾನಗರ, ಬೆಂಗಳೂರು)

## ಗೃಹಪ್ರವೇಶ

ಶ್ರೀಮತಿ ರಜನಿ ಮತ್ತು ಶ್ರೀ ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್ ಉಡುಪಿ ಇವರು ಉಡುಪಿ ವಾದಿರಾಜ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ 'ವೈಷ್ಣವಿ' ಕಟ್ಟಡದ ಪ್ರವೇಶೋತ್ಸವವನ್ನು ತಾ.28-01-2012ರಂದು ನೆರವೇರಿಸಿದರು.

★★★★

ಶ್ರೀಮತಿ ಶ್ರೀದೇವಿ ಮತ್ತು ಡಾ| ವೈ. ರವೀಂದ್ರನಾಥ ರಾವ್ ಇವರು ಹೇರೂರು ಬ್ರಹ್ಮಾವರದಲ್ಲಿ ನೂತನವಾಗಿ ಕಟ್ಟಿಸಿದ ತಮ್ಮ ವಿಸ್ತ್ರತ ಗೃಹ 'ಕಲಾಂಜಲಿ' ಇದರ ಪ್ರವೇಶೋತ್ಸವವನ್ನು ತಾ.29-01-2012ರಂದು ನೆರವೇರಿಸಿದರು.

## ಶುಭ ಜನನ

ಪಾಂಡವಪುರದಲ್ಲಿರುವ ಶ್ರೀ ಅರವಿಂದ ಪಿ.ಎಸ್. ಮತ್ತು ರಮ್ಯ ದಂಪತಿಗಳಿಗೆ ತಾ.11-01-2012ನೇ ಬುಧವಾರದಂದು ಗಂಡು ಮಗುವಿನ ಜನನ.

## ಉಪನಯನ

### ಚಿ| ಅನಂತ ಕುಮಾರ

ಶ್ರೀಮತಿ ಮತ್ತು ಶ್ರೀ ಜಯಶೀಲ ಇವರ ಪುತ್ರ ಅನಂತಕುಮಾರನ ಬ್ರಹ್ಮೋಪದೇಶವು ತಾ.02-02-2012ರಂದು ಅವರ ಮಲ್ಲಮಾರು ಸ್ವಗೃಹ 'ದುರ್ಗಾಕೃಪಾ'ದಲ್ಲಿ ನೆರವೇರಿತು.

## ವಿಳಾಸ ಬದಲಾವಣೆ

P.B.RAO
E-22, Shri Kumar Society,
Nehru Road, Santacruz East,
Mumbai -400055.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ : ಎಂಡೋಸ್ಕೋಪಿ (endoscopy) ಎಂದರೇನು? ಅದರ ಉಪಯೋಗಗಳೇನು?**

**ಉತ್ತರ :** ಆಧುನಿಕ ವೈದ್ಯಕೀಯ ಚಿಕಿತ್ಸಾಪದ್ಧತಿಯಲ್ಲಿ ರೋಗನಿದಾನಕ್ಕೆ (diagnosis) ಹೆಚ್ಚಿನ ಮಹತ್ವ ನೀಡಲಾಗಿದೆ. ಯಾಕೆಂದರೆ ರೋಗಿಯು ಬಳಲುತ್ತಿರುವ ಖಾಯಿಲೆಯನ್ನು ಪತ್ತೆ ಹಚ್ಚಿದರೆ ಚಿಕಿತ್ಸೆಯು ಸರಳವೂ ಮತ್ತು ನಿಖರವೂ ಆಗಿರುತ್ತದೆ. ಎಂಡೋಸ್ಕೋಪಿ ಎಂಬುದು ದೇಹಕ್ಕೆ ಬಂದ ಖಾಯಿಲೆಯನ್ನು ಪತ್ತೆ ಹಚ್ಚಲಿಕ್ಕಾಗಿ (diagnosis) ಇರುವಂತಹಾ ಒಂದು ಉಪಕರಣ. ಈ ಉಪಕರಣವನ್ನು ಒಂದು ದೂರದರ್ಶಕಕ್ಕೆ ಹೋಲಿಸಬಹುದು. ಈ ಉಪಕರಣವೊಂದು ಸಪೂರವಾದ ಉದ್ದದ ನಳಿಕೆ. ಈ ನಳಿಕೆಯ ಎರಡೂ ಬದಿಯಲ್ಲಿ ಒಂದೊಂದು ಪೀನಮಸೂರವನ್ನು ಅಳವಡಿಸಲಾಗಿದೆ. ದೂರದರ್ಶಕದಲ್ಲಿ ನೋಡುವಂತೆ ನಳಿಕೆಯ ಒಂದು ತುದಿಯಲ್ಲಿ ಕಣ್ಣಿಟ್ಟು ನೋಡಿದರೆ ನಳಿಕೆಯ 'ಇನ್ನೊಂದು ತುದಿ'ಯಲ್ಲಿರುವ ವಸ್ತುವನ್ನು ನೋಡಬಹುದು. ಈ 'ಇನ್ನೊಂದು ತುದಿ'ಯಲ್ಲಿ ಬೆಳಕು ಹಾಯಿಸುವ ವ್ಯವಸ್ಥೆಯೂ ಇರುತ್ತದೆ. ಈ ಎರಡು ಪೀನಮಸೂರಗಳ ಮಧ್ಯೆ ಬೆಳಕನ್ನು ಸಾಗಿಸುವ ವ್ಯವಸ್ಥೆಯನ್ನು ಓಪ್ಟಿಕಲ್ ಫೈಬರ್ (optical fiber)ಗಳನ್ನು ಉಪಯೋಗಿಸಿ ಮಾಡಿದರೆ ನೋಡುವ ವಸ್ತು ಸ್ಪಷ್ಟವಾಗಿ ಗೋಚರಿಸುವುದು ಮಾತ್ರವಲ್ಲದೆ ಬೇಕಿದ್ದಲ್ಲಿ ದೂರದರ್ಶಕ ನಳಿಕೆಯನ್ನು ಬಗ್ಗಿಸಿಯೂ (flexible) ಉಪಯೋಗಿಸಲಿಕ್ಕೆ ಬರುತ್ತದೆ. ಇದು ಕೇವಲ ಎಂಡೋಸ್ಕೋಪಿ ಉಪಕರಣದ ಸ್ಥೂಲ ಚಿತ್ರಣ ಮಾತ್ರ. 'ಕಣ್ಣಿನ ತುದಿ'ಯ ಮಸೂರವನ್ನು ಕ್ಯಾಮರವೊಂದಕ್ಕೆ ಸಂಪರ್ಕ ನೀಡುವ ಮೂಲಕ ನೋಡುವ ವಸ್ತುವಿನ ಬಿಂಬವನ್ನು ಟಿ.ವಿ.ಪರದೆಯ ಮೇಲೆ ವೀಕ್ಷಿಸಬಹುದು. ಹಾಗೆಯೇ ವಸ್ತುವನ್ನು ನೋಡುವ ''ಇನ್ನೊಂದು ತುದಿ''ಯನ್ನು ಕತ್ತು ತಿರುಗಿಸಿ ನೋಡುವಂತೆ 180 ಡಿಗ್ರಿಗಳಷ್ಟು ತಿರುಗಿಸಿ ನೋಡಬಹುದಾದ ವ್ಯವಸ್ಥೆಯೂ ಈ ಉಪಕರಣದಲ್ಲಿದೆ. ಆಧುನಿಕ ಎಂಡೋಸ್ಕೋಪಿ ನಳಿಕೆಯಲ್ಲಿ ಮಸೂರಗಳ ಬದಲು ಕ್ಯಾಮರಾದ 'ಚಿಪ್' ಎಂದು ಕರೆಯುವ ಚಿತ್ರೀಕರಿಸುವ ಸಣ್ಣ ಇಲೆಕ್ಟ್ರಾನಿಕ್ ಉಪಕರಣವನ್ನು ತುದಿಯಲ್ಲಿ ಅಳವಡಿಸಿರುತ್ತಾರೆ. ಅದರ ಮೂಲಕ ನಾವು ವಸ್ತುವಿನ ಚಿತ್ರವನ್ನು ನೇರವಾಗಿ ಟಿ.ವಿ.ಪರದೆಯ ಮೇಲೆ ವೀಕ್ಷಿಸಬಹುದು.

ಈ ಎಂಡೋಸ್ಕೋಪಿ ಉಪಕರಣವನ್ನು ಬಾಯಿ, ಮೂಗು, ಕಿವಿ, ಮೂತ್ರನಾಳದ ರಂಧ್ರ, ಗುದದ್ವಾರ, ಗರ್ಭದ್ವಾರಗಳ ಮೂಲಕ ದೇಹದೊಳಗೆ ಹೊಕ್ಕಿಸಿ ದೇಹದ ಆಯಾ ಅಂಗಗಳನ್ನು ಅವಲೋಕಿಸಬಹುದು. ಆಯಾ ಎಂಡೋಸ್ಕೋಪಿ ಉಪಕರಣದ ಆಕಾರ ಮತ್ತು ಗಾತ್ರವು ಅದನ್ನು ಪ್ರಯೋಗಿಸುವ ಅಂಗದ ಆಕಾರ ಮತ್ತು ಗಾತ್ರವನ್ನು ಅವಲಂಬಿಸಿ ಇರುತ್ತದೆ. ಹಾಗೆಯೇ ಈ ಎಂಡೋಸ್ಕೋಪಿ ಉಪಕರಣವನ್ನು ಅದನ್ನು ಉಪಯೋಗಿಸುವ ಅಂಗದ ಹೆಸರಿನ ಮೇಲೆ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಉದಾ : ಅನ್ನನಾಳ-ಇಸೋಫೇಗೋಸ್ಕೋಪ್, ಜಠರ-ಗ್ಯಾಸ್ಟ್ರೋಸ್ಕೋಪ್, ದೊಡ್ಡಕರುಳು-ಕೊಲೊನೋಸ್ಕೋಪ್, ಮೂತ್ರಕೋಶ-ಸಿಸ್ಟೋಸ್ಕೋಪ್, ಗರ್ಭಕೋಶ-ಹಿಸ್ಟಿರೋಸ್ಕೋಪ್, ಹೊಟ್ಟೆಯ ಕುಹರ-ಲೆಪ್ರೋಸ್ಕೋಪ್, ಕೀಲುಗಳು-ಆರ್ತ್ರೋಸ್ಕೋಪ್. ಇವುಗಳಲ್ಲಿ ಲೆಪ್ರೋಸ್ಕೋಪ್‌ನ್ನು ಹೊಕ್ಕುಳಿನ ಮೂಲಕ ಸಣ್ಣ ಗಾಯ ಮಾಡಿ ಹೊಟ್ಟೆಯೊಳಗೂ, ಆರ್ತ್ರೋಸ್ಕೋಪನ್ನು ಆಯಾ ಕೀಲಿನ (Joints) ಮೇಲೆ ಸಣ್ಣ ಗಾಯ ಮಾಡಿ ಒಳಗೆ ಸೇರಿಸುತ್ತಾರೆ. ಎಂಡೋಸ್ಕೋಪಿ ಉಪಕರಣವನ್ನು ಪ್ರಯೋಗಿಸುವಾಗ ರೋಗಿಗೆ ನೋವಿನ ಅನುಭವವಾಗದಂತೆ ಸ್ಥಾನೀಯ ಅರಿವಳಿಕೆ ಅಥವಾ ಮತಿ ತಪ್ಪಿಸುವ ಅರಿವಳಿಕೆಯನ್ನು ನೀಡುತ್ತಾರೆ.

ಎಂಡೋಸ್ಕೋಪಿ ಉಪಕರಣದ ಮುಖಾಂತರ ನಾವು ಮಾಮೂಲಿಯಾಗಿ ನೋಡಲು ಸಾಧ್ಯವೇ ಇಲ್ಲವಾದ ದೇಹದ ಒಳ ಅಂಗಗಳನ್ನು ನೇರವಾಗಿ ನೋಡಬಹುದು. ಹಾಗೆಯೇ ಅವುಗಳೊಳಗೆ ಆದ ಹುಣ್ಣು, ಬೆಳೆದ ದುರ್ಮಾಂಸ, ಕಲ್ಲುಗಳು ಮತ್ತು ಇನ್ನಿತರ ಖಾಯಿಲೆಗಳನ್ನು ಕಂಡು ಗುರುತಿಸಬಹುದು. ಅಷ್ಟು ಮಾತ್ರವಲ್ಲದೆ ಖಾಯಿಲೆ ಇರುವ ಅಂಗದ ಭಾಗದ ಸಣ್ಣ ತುಣುಕನ್ನು ಸಹಾ ತೆಗೆದು ಪರೀಕ್ಷೆಗೆ (biopsy) ಕಳುಹಿಸಬಹುದು.

ಎಂಡೋಸ್ಕೋಪಿ ಮುಖಾಂತರವೇ ಕಾಯಿಲೆ ಗುಣವಾಗಲು ಮಾಡುವ ಶಸ್ತ್ರಚಿಕಿತ್ಸೆ ಮಾಡುವುದನ್ನು 'ಎಂಡೋಸ್ಕೋಪಿಕ್ ಸರ್ಜರಿ' ಎನ್ನುತ್ತೇವೆ. ಉದಾಹರಣೆಗೆ ಲೆಪ್ರೋಸ್ಕೋಪಿ ಮುಖಾಂತರ ಹೊಟ್ಟೆಯ ವಿವಿಧ ಅಪರೇಶನ್‌ಗಳಾದ ಪಿತ್ತಕೋಶದ ಕಲ್ಲನ್ನು ತೆಗೆಯುವುದು, ಅಪೆಂಡಿಕ್ಸ್, ಗರ್ಭಕೋಶದ ಶಸ್ತ್ರಚಿಕಿತ್ಸೆ ಇತ್ಯಾದಿ. ಹಾಗೆಯೇ ಸಿಸ್ಟೋಸ್ಕೋಪಿ ಮುಖಾಂತರ ಮೂತ್ರಕೋಶದ ಕಲ್ಲುಗಳನ್ನು ತೆಗೆಯುವುದು, ಪ್ರೋಸ್ಟೇಟ್ ಗ್ರಂಥಿಯ ಶಸ್ತ್ರಚಿಕಿತ್ಸೆ, ಹಿಸ್ಟಿರೋಸ್ಕೋಪಿ ಮುಖಾಂತರ ಗರ್ಭಕೋಶದ ಗಡ್ಡೆಗಳು ಹಾಗೂ ದುರ್ಮಾಂಸ ತೆಗೆಯುವುದು, ಗ್ಯಾಸ್ಟ್ರೋಸ್ಕೋಪ್ ಮುಖಾಂತರ ಜಠರದಲ್ಲಿನ ಹುಣ್ಣುಗಳಿಂದಾಗುತ್ತಿರುವ ರಕ್ತಸ್ರಾವವನ್ನು ನಿಲ್ಲಿಸುವುದು.

ಹೀಗೆ ಎಂಡೋಸ್ಕೋಪಿ ಉಪಕರಣ ಇಲ್ಲವಾಗಿದ್ದರೆ ಹೊಟ್ಟೆಯನ್ನು ಕೊಯ್ದೇ ಗುರುತಿಸಬೇಕಾಗಿದ್ದ ಕಾಯಿಲೆಗಳನ್ನು ಗುರುತಿಸುವುದು ಮತ್ತು ಅದಕ್ಕೆ ಬೇಕಾದ ಶಸ್ತ್ರಚಿಕಿತ್ಸೆಗಳನ್ನು ಈ ಉಪಕರಣಗಳ ಮೂಲಕ ಮಾಡುವುದರಿಂದ ರೋಗಿಗಾಗುವ ಉಪಯೋಗವನ್ನು ನೀವೆ ಊಹಿಸಿಕೊಳ್ಳಬಹುದು.


**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ವಿಜ್ಞಾಪನೆ

ತಮಗೆಲ್ಲರಿಗೂ ತಿಳಿದಿರುವಂತೆ ಶ್ರೀಶಾರದಾ ಪತ್ರಿಕೆಯು ಪ್ರತಿ ತಿಂಗಳು 15ನೇ ತಾರೀಕಿಗೆ ಅಂಚೆಯಲ್ಲಿ ರವಾನೆಯಾಗುತ್ತಿದೆ. ಈ ಪತ್ರಿಕೆಯನ್ನು ಪ್ರತಿ ತಿಂಗಳೂ ಮುದ್ರಿಸಿ ಕ್ಲಪ್ತ ಸಮಯದಲ್ಲಿ ಕಳುಹಿಸಲು ಅನುಕೂಲವಾಗುವಂತೆ ಸಮಾಜ ಬಾಂಧವರು ತಮ್ಮ ಲೇಖನ, ವರದಿ, ಸುದ್ದಿ ಇತ್ಯಾದಿಗಳನ್ನು ಪ್ರತಿ ತಿಂಗಳು 8ನೇ ತಾರೀಕಿನ ಒಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ.

– ಸಂಪಾದಕ ಮಂಡಳಿ

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ - 2.



ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ

ತಾ.29-04-2012 ಆದಿತ್ಯವಾರ

### ಸಾಮೂಹಿಕ ಉಪನಯನ

ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ. ಅದೇ ದಿನ ಬೆಳಗ್ಗೆ 11-00 ಗಂಟೆಗೆ **ಶ್ರೀ ಶಂಕರ ತತ್ವ ಆಧಾರಿತ ಪ್ರವಚನ** ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ :

– ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.20-04-2012ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ವಿನಂತಿಸಲಾಗಿದೆ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

### ''ಪ್ರಾಣಯೋಗ ಶಿಬಿರ''

ಪತಂಜಲಿ ಯೋಗ ಪೀಠದ ಬಾಬಾ ರಾಮದೇವಜಿಯವರಿಂದ ನಿರ್ದೇಶಿತ ''ಉಚಿತ ಪ್ರಾಣಯೋಗ ಶಿಬಿರ''ವು ಅವರಿಂದ ನುರಿತ ಶಿಕ್ಷಕರಿಂದ ತಾ.18-02-2012ರಿಂದ 23-02-2012ರ ವರೆಗೆ ಶಾರದಾ ಮಂಟಪದಲ್ಲಿ ಬೆಳಿಗ್ಗೆ 5-30ರಿಂದ 7-00 ಗಂಟೆಯವರೆಗೆ ನಡೆಯಲಿದೆ. ಇದರ ಲಾಭವನ್ನು ಪಡೆಯಲಿಚ್ಛಿಸುವ ಸಮಾಜಬಾಂಧವರು ಶಿಬಿರದಲ್ಲಿ ಭಾಗವಹಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ. ಶಿಬಿರಕ್ಕೆ ಬರುವಾಗ ಖಾಲಿ ಹೊಟ್ಟೆಯಲ್ಲಿ ಬರಬೇಕು. ದಪ್ಪನೆಯ ಬೆಡ್‌ಶೀಟ್ ಮತ್ತು ಕರವಸ್ತ್ರವನ್ನು ತರಬೇಕು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಬೆಜೈ ಚರ್ಚ್ ರಸ್ತೆ, ಮಂಗಳೂರು.

### ಬೇಕಾಗಿದ್ದಾರೆ

**ಪಾರ್ಟ್‌ಟೈಮ್ ಕೆಲಸಕ್ಕೆ ಕ್ಲರ್ಕ್/ಅಕೌಂಟೆಂಟ್**

(ಬೆಳಿಗ್ಗೆ 11-00ರಿಂದ ಸಾಯಂಕಾಲ 4-00ರ ವರೆಗೆ)

ಗಂಡಸರು/ಹೆಂಗಸರು

ಅಕೌಂಟ್ಸ್‌ನಲ್ಲಿ ಪರಿಣತಿ ಹೊಂದಿರುವ ಪದವೀಧರರು ಸಂಪರ್ಕಿಸಿರಿ

-ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾಸದನ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು-575003.

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

– ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.11-03-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-02-2012 ಫಾಲ್ಗುಣ ಶುದ್ಧ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.17-02-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿ ವೇತನ ವೇದಿಕೆ

ಶ್ರೀಶಾರದಾ ಮಂಟಪ, ಉಡುಪಿ-2

### ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ) ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

ದಿನಾಂಕ 11-03-2012 (ರವಿವಾರ) ಸ್ಥಳ : ಶಾರದಾ ಮಂಟಪ, ಉಡುಪಿ.

ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ ಮತ್ತು ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಅಥವಾ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ (ಫೋನ್ : 9972985744) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.

– ಅಧ್ಯಕ್ಷರು ಮತ್ತು ಸದಸ್ಯರು, ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿವೇತನ ವೇದಿಕೆ.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INB010606122,NSE: INS23106924)


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org